ದೆಹಲಿ ಕರ್ನಾಟಕ ಸಂಘದ

# ಅಭಿಮತ

ಏಪ್ರಿಲ್ 2021
ಬೆಲೆ ರೂ. 1



## ಕ್ರಿಕೆಟ್ ಅಂಗಣದಲ್ಲಿ ಸಂಸದರು

# ಕ್ರಿಕೆಟ್ ಅಂಗಣದಲ್ಲಿ ಸಂಸದ ಪ್ರಜ್ವಲ್ ರೇವಣ್ಣ !



ದಿನಾಂಕ 13.03.2021ರಂದು ದೆಹಲಿ ಕರ್ನಾಟಕ ಸಂಘ ಆಯೋಜಿಸಿದ್ದ ವಾರ್ಷಿಕ ಕ್ರಿಕೆಟ್ ಪಂದ್ಯಾವಳಿಯಲ್ಲಿ ಹಾಸನದ ಲೋಕಸಭಾ ಸದಸ್ಯ ಸನ್ಮಾನ್ಯ ಪ್ರಜ್ವಲ್ ರೇವಣ್ಣ ಅವರು ಕನ್ನಡ ಸಿರಿ ತಂಡದಲ್ಲಿ ಆಡಿ ಮನರಂಜಿಸಿದರು. ಈ ಸಂದರ್ಭದಲ್ಲಿ ಆಗಮಿಸಿದ ಸಂಸದರನ್ನು ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ.ಅವನೀಂದ್ರನಾಥ್ ರಾವ್, ಪ್ರಧಾನ ಕಾರ್ಯದರ್ಶಿ ಸಿ.ಎಂ.ನಾಗರಾಜ, ಕ್ರೀಡಾ ಸಮಿತಿಯ ಅಧ್ಯಕ್ಷ ಡಾ.ಎಂ.ಎಸ್.ಶಶಿಕುಮಾರ್, ಸಂಚಾಲಕ ಸಂತೋಷ್ ಜೆ, ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯ ಶಿವಪ್ಪ ಎಂ ಸ್ವಾಗತಿಸಿ ಗೌರವಿಸಿದರು.



ದಿನಾಂಕ 13.03.2021 ಹಾಗೂ 21.03.21ರಂದು ದೆಹಲಿ ಕರ್ನಾಟಕ ಸಂಘ ಆಯೋಜಿಸಿದ ವಾರ್ಷಿಕ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೆಳ್ಳಿಯಪ್ಪಾಸ್ ಗ್ರೂಪ್ ತಂಡ ಕ್ರಿಕೆಟ್, ವಾಲಿಬಾಲ್, ಕಬಡ್ಡಿ ಈ ಮೂರೂ ಪಂದ್ಯಾವಳಿಯನ್ನು ಗೆದ್ದು ಬಹುಮಾನಗಳನ್ನು ಮುಡಿಗೇರಿಸಿಕೊಂಡಿತು. ಇದೇ ಸಂದರ್ಭದಲ್ಲಿ ಕಳೆದ ಬಾರಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ರನ್ನರ್‌ಅಪ್ ಟ್ರೋಫಿ ಗೆದ್ದುಕೊಂಡಿದ್ದ ಬೆಳ್ಳಿಯಪ್ಪ ತಂಡಕ್ಕೆ ಟ್ರೋಫಿಯನ್ನು ನೀಡಿ ಅಭಿನಂದಿಸಲಾಯಿತು.



ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳಿ ಸದಸ್ಯರು
ಚಂದ್ರಶೇಖರ ಜೋಳದರಾಶಿ
ಎಸ್. ಕುಮಾರ್
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಅನಂತರಾಮ ಅರಳಿ
ಡಿ.ವಿ.ಎಸ್. ಮೂರ್ತಿ
ಈಶ್ವರ ಮಡಿವಾಳ

ಸಂಪುಟ 31 । ಸಂಚಿಕೆ 7
ಏಪ್ರಿಲ್ 2021

## ಸಂಪಾದಕೀಯ

# ಮತದಾನ ಅಮೂಲ್ಯ

ಪಶ್ಚಿಮ ಬಂಗಾಳ ಮತ್ತು ಕರ್ನಾಟಕದ ನೆರೆಯ ರಾಜ್ಯ ತಮಿಳುನಾಡು ಸೇರಿದಂತೆ ಭಾರತದಲ್ಲಿ ಚುನಾವಣೆ ನಡೆಯುತ್ತಿದೆ. ಚುನಾವಣೆಯಲ್ಲಿ ಪ್ರಜೆಗಳು ಮಾಡುವ ಮತದಾನ ಅವರ ಮೂಲಭೂತ ಹಕ್ಕುಗಳಲ್ಲಿ ಪ್ರಮುಖವಾದುದು. ಎಲ್ಲಿ ಹಕ್ಕು ಇರುವುದೋ ಅಲ್ಲಿ ಹೊಣೆಗಾರಿಕೆ ಇದ್ದೇ ಇರುತ್ತದೆ. ಮತದಾರರ ಪಾಲಿಗೆ ಮತ ಚಲಾಯಿಸುವ ಹೊಣೆಗಾರಿಕೆ ಎಲ್ಲಕ್ಕಿಂತ ಹೆಚ್ಚಿನದ್ದು. ಏಕೆಂದರೆ ಅವರು ಚಲಾಯಿಸುವ ಮತವು ಸಮರ್ಥ ನಾಯಕರ ಹುಟ್ಟಿಗೆ ಕಾರಣವಾಗುತ್ತದೆ. ಆದ್ದರಿಂದಲೇ ಮತದಾನ ಅಮೂಲ್ಯವಾದುದು.

ಕೋಟ್ಯಾಂತರ ಜನಸಂಖ್ಯೆ ಇರುವ ಭಾರತದಂತಹ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಚುನಾವಣೆ ಹತ್ತಿರ ಬಂದಾಗ ಮತದಾರರ ಪಾಲಿಗೆ ಗೊಂದಲದ ವಾತಾವರಣ ಇರುತ್ತದೆ. ಕಾರಣ ಮತ ಚಲಾಯಿಸುವ ಹಿಂದಿನ ದಿನದವರೆಗೂ ಇರುವ ಪಕ್ಷಗಳ ವಿಲೀನ ಪ್ರಕ್ರಿಯೆ, ಯಾವ ಯಾವ ಪ್ರಾದೇಶಿಕ ಪಕ್ಷಗಳು ವಿವಿಧ ರಾಷ್ಟ್ರೀಯ ಪಕ್ಷಗಳನ್ನು ಸೇರಲಿವೆ ಎಂಬ ಕುತೂಹಲ, ಯಾರು ಬಾಹ್ಯ ಬೆಂಬಲಿಗರು ಅಥವಾ ಯಾರು ನೇರ ಬೆಂಬಲಿಗರು ಎನ್ನುವ ಲೆಕ್ಕಾಚಾರದೊಂದಿಗೆ ಪಕ್ಷದಿಂದ ಪಕ್ಷಕ್ಕೆ ನೆಗೆದಾಡುವ ರಾಜಕೀಯ ಮುಖಂಡರು, ಕಾರ್ಯಕರ್ತರು ಕುತೂಹಲದ ಸನ್ನಿವೇಶವನ್ನು ನಿರ್ಮಿಸುತ್ತಾರೆ.

ಚುನಾವಣಾ ದೃಷ್ಟಿಯಿಂದಲೇ ಹುಟ್ಟು ಹಾಕುವ ಹಗರಣಗಳು, ಅಪರಾಧಗಳಿಂದ ಖುಲಾಸೆ, ಅಧಿಕಾರಕ್ಕಾಗಿ ಹಪಾಹಪಿ, ಸೀಟು ಹೊಂದಾಣಿಕೆಯ ಗೊಂದಲ ಮತ್ತು ಪರಸ್ಪರ ಕೆಸರೆರಚುವ ದೋಷಾರೋಪಣೆಯನ್ನು ನೋಡುತ್ತಾ ದೇಶದ ಭವಿಷ್ಯವನ್ನು ತನ್ನ ಅಮೂಲ್ಯವಾದ ಮತಗಳಿಂದ ನಿರ್ಧರಿಸಲು ಹೊರಟಿರುವ ಮತದಾರನಿಗೆ ನಿರಾಶೆಯಾದರೆ ಅಚ್ಚರಿಯಿಲ್ಲ. ಹೀಗಾಗದಂತೆ ನೋಡಿಕೊಳ್ಳುವುದು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲ ಅಭ್ಯರ್ಥಿಗಳ ಕರ್ತವ್ಯ.

ಪ್ರಜಾಪ್ರಭುತ್ವ ಇರುವಲ್ಲಿ ಪ್ರತಿಯೊಬ್ಬ ನಾಗರೀಕನೂ ಪ್ರಸ್ತುತವೆನಿಸಬೇಕಾದರೆ ಆತ ಅಥವಾ ಆಕೆ ತನಗೆ ಒದಗಿದ ಮತದಾನದ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು. ಈ ಸದುಪಯೋಗ ಅವರು ಚಲಾಯಿಸುವ ಮತವನ್ನು ಅವಲಂಬಿಸಿದೆ.

ಭಾರತದಲ್ಲಿ ಸ್ಥಳೀಯ ಸಂಘ–ಸಂಸ್ಥೆಗಳಿಂದ ತೊಡಗಿ ರಾಜ್ಯ, ರಾಷ್ಟ್ರಮಟ್ಟದವರೆಗೆ ಮತ್ತೆ ಮತ್ತೆ ಚುನಾವಣೆಗಳು ನಡೆಯುತ್ತಲೇ ಇರುತ್ತವೆ. ರಾಷ್ಟ್ರ ರಾಜಧಾನಿಯ ಕನ್ನಡಿಗರ ಪ್ರತಿಷ್ಠಿತ ಸಂಸ್ಥೆ ದೆಹಲಿ ಕರ್ನಾಟಕ ಸಂಘದ ಚುನಾವಣೆಗೆ ಇನ್ನು ಕೆಲವೇ ದಿನಗಳು ಬಾಕಿ ಉಳಿದಿವೆ. ಈ ದಿನಗಳಲ್ಲಿ ಸಂಘದ ಆಜೀವ ಸದಸ್ಯರು ಕೈಗೊಳ್ಳುವ ನಿರ್ಧಾರವು ಮುಂಬರುವ ಕಾರ್ಯಕಾರಿ ಸಮಿತಿಯ ರಚನೆಗೆ ಕಾರಣವಾಗುತ್ತದೆ. ಒಂದು ಅತ್ಯುತ್ತಮ ಕಾರ್ಯಕಾರಿ ಸಮಿತಿಯನ್ನು ನೀಡುವ ಹೊಣೆಗಾರಿಕೆ ಇವರ ಪಾಲಿಗೆ ಇದೀಗ ಬಂದಿದೆ.

ಏಳು ದಶಕಗಳನ್ನು ಕಂಡಿರುವ ದೆಹಲಿ ಕರ್ನಾಟಕ ಸಂಘ ಈವರೆಗೆ ಕನಿಷ್ಠ 30 ಚುನಾವಣೆಗಳನ್ನು ಕಂಡಿರಬಹುದು. ಎಂದಿನಂತೆ ಈ ಬಾರಿಯೂ ಅನೇಕ ಸದಸ್ಯರು ಕೋವಿಡ್ ನಂತಹ ವಿಪತ್ತಿನ ಸಂದರ್ಭದಲ್ಲಿಯೂ ಚುನಾವಣೆಯಲ್ಲಿ ಸ್ಪರ್ಧಿಸಲು ಉತ್ಸಾಹವನ್ನು ತೋರಿದ್ದಾರೆ. ಒಂದು ಸಮರ್ಥ ಮತ್ತು ಉತ್ಸಾಹೀ ಕನ್ನಡ ಕಾರ್ಯಕರ್ತರು ಇರುವ ಕಾರ್ಯಕಾರಿ ಸಮಿತಿ ಆರಿಸಿ ಬರಲಿ ಎಂದು ನಾವು ಆಶಿಸುವ.

ಏಪ್ರಿಲ್ 25ರಂದು ಈ ಬಾರಿಯ ಚುನಾವಣೆ ನಡೆಯಲಿದೆ. ಎಲ್ಲ ಚುನಾವಣೆಗಳಂತೆ ಸಂಘರ್ಷ, ಹೋರಾಟ ಇಲ್ಲಿಯೂ ಇದೆ. ಆದರೆ ಚುನಾವಣೆ ಮುಗಿದ ಬಳಿಕ ಗೆದ್ದ ಸದಸ್ಯರು ಒಮ್ಮತದಿಂದ ಕನ್ನಡ ಮತ್ತು ಕನ್ನಡಿಗರ ಏಳಿಗೆಗೆ ಶ್ರಮಿಸುವಂತಾಗಲಿ. ಏಕೆಂದರೆ ಪದವಿ ಸ್ಥಾನಮಾನಗಳು ಶಾಶ್ವತವಲ್ಲ. ನಾವು ನಾಡು–ನುಡಿಗೆ ಸಲ್ಲಿಸುವ ಕೊಡುಗೆಗಳು ಜನಮಾನಸದಲ್ಲಿ ಶಾಶ್ವತವಾಗಿ ನೆಲೆಗೊಳ್ಳುತ್ತವೆ. ಈ ನಿಟ್ಟಿನಲ್ಲಿ ನಿಸ್ವಾರ್ಥವಾಗಿ ಕನ್ನಡದ ಕೈಂಕರ್ಯಕ್ಕೆ ಪಣತೊಟ್ಟ ಕನ್ನಡಿಗರು ದೆಹಲಿ ಕರ್ನಾಟಕ ಸಂಘವನ್ನು ನಿರಂತರವಾಗಿ ಮುನ್ನೆಡೆಸುವಂತಾಗಲಿ.

ಈ ತಿಂಗಳ ಕೊನೆಗೆ ದೆಹಲಿ ಕರ್ನಾಟಕ ಸಂಘವು ನೂತನ ಕಾರ್ಯಕಾರಿ ಸಮಿತಿಯನ್ನು ಕಾಣಲಿದೆ. ಅದನ್ನು ಸ್ವಾಗತಿಸೋಣ. ದೆಹಲಿ ಮತ್ತು ಎನ್.ಸಿ.ಆರ್. ಭಾಗದ ಕನ್ನಡಿಗರ ಹಾಗೂ ದೆಹಲಿ ಕರ್ನಾಟಕ ಸಂಘದ ಚಟುವಟಿಕೆಯ ದಾಖಲೆಯಾಗಿರುವ 'ಅಭಿಮತ' ಯಶಸ್ವಿಯಾಗಿ ಪ್ರಕಟವಾಗುತ್ತಿದೆ ಎಂದು ನಾಡಿನ ಮಹತ್ವದ ಲೇಖಕರೂ ಸೇರಿದಂತೆ ಹಲವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಪತ್ರಿಕೆಗೆ ಪ್ರೋತ್ಸಾಹ ನೀಡಿದ ಎಲ್ಲರನ್ನು ಪ್ರಧಾನ ಸಂಪಾದಕನಾಗಿ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ ಮತ್ತು ಈ ಅವಧಿಯ ಕೊನೆಯ ಸಂಚಿಕೆಯನ್ನು ನಿಮ್ಮ ಕೈಗೆ ನೀಡುತ್ತಿದ್ದೇನೆ. ನಿಮ್ಮ ಪ್ರೀತಿ ವಿಶ್ವಾಸ ಹೀಗೆ ಇರಲಿ.

ಸದಾಶಯ ಮತ್ತು ವಿಶ್ವಾಸಗಳೊಂದಿಗೆ,

ಡಾ. ಅವನೀಂದ್ರನಾಥ್ ರಾವ್

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 31 ಸಂಚಿಕೆ 7
ಏಪ್ರಿಲ್ 2021, ಬೆಲೆ ರೂ. 1

## ನಮ್ಮನಮ್ಮೊಳಗೆ

# ಸಂಘದ ಚುನಾವಣೆಯ ಸುತ್ತಮುತ್ತ

ತಮಗೆಲ್ಲ ತಿಳಿದಿರುವ ಹಾಗೆ ಸಂಘದ ವಾರ್ಷಿಕ ಸರ್ವಸದಸ್ಯರ ಸಭೆ ಮತ್ತು ನೂತನ ಕಾರ್ಯಕಾರಿ ಸಮಿತಿಯ ಆಯ್ಕೆಗೆ ಈಗಾಗಲೆ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ಏಪ್ರಿಲ್ 18 ರಂದು ಸರ್ವಸದಸ್ಯರ ಸಭೆಯನ್ನು ನಿಗದಿಗೊಳಿಸಲಾಗಿದೆ. ಚುನಾವಣೆಗಳನ್ನು ಏಪ್ರಿಲ್ 25ರಂದು ದೆಹಲಿ ಕನ್ನಡ ಶಾಲೆಯಲ್ಲಿ ನಡೆಸಲು ನಿರ್ಧರಿಸಲಾಗಿದೆ. ಈ ಕುರಿತಾಗಿ ಸಂಘದ ಸದಸ್ಯರಿಗೆಲ್ಲರಿಗೂ ಅಧಿಸೂಚನೆಯನ್ನು ಕಳುಹಿಸಲಾಗಿದೆ. ಭಾರತ ಸರಕಾರದಲ್ಲಿ ಹಿರಿಯ ಅಧಿಕಾರಿಗಳಾಗಿರುವ ಶ್ರೀಯುತ ಅನಂತರಾಮ ಅರಳಿಯವರನ್ನು ಚುನಾವಣಾ ಅಧಿಕಾರಿಗಳನ್ನಾಗಿ ಕಾರ್ಯಕಾರಿ ಸಮಿತಿ ಆರಿಸಿದೆ. ಈ ಜವಾಬ್ದಾರಿಯನ್ನು ಅವರು ಒಪ್ಪಿಕೊಂಡಿದ್ದಾರೆ.

ಈ ಎಲ್ಲ ಮೇಲಿನ ನಿರ್ಧಾರಗಳನ್ನು ಸದ್ಯದ ಕಾರ್ಯಕಾರಿ ಸಮಿತಿ ಮಾರ್ಚ ಕೊನೆಯ ವಾರದಲ್ಲಿ ತೆಗೆದುಕೊಳ್ಳುವ ಸಂದರ್ಭದಲ್ಲಿ ಕೊರೊನಾದ ಪ್ರಕರಣಗಳು, ಅದರಲ್ಲೂ ದೆಹಲಿ ಮತ್ತು ಅದರ ರಾಜಧಾನಿ ಪ್ರದೇಶದಲ್ಲಿ, ಹೆಚ್ಚಿರಲಿಲ್ಲ. ಮಹಾರಾಷ್ಟ್ರದ ಅಮರಾವತಿ, ನಾಗಪುರ ಮತ್ತು ಇತರ ಅಲ್ಲಿನ ಕೆಲ ಜಿಲ್ಲೆಗಳಲ್ಲಿ ಕೊರೊನಾದ ಸಮಸ್ಯೆ, ಅದರಲ್ಲೂ ಕೆಲವು ರೂಪಾಂತರಿ ಕೊರೊನಾದ ಸೆಲೆಗಳು, ನಿಧಾನವಾಗಿ ಗಂಭೀರವಾದ ಸ್ವರೂಪವನ್ನು ಪಡೆದುಕೊಳ್ಳತೊಡಗಿದ್ದವು. ಹಾಗೆಂದು ಉತ್ತರ ಭಾರತದಲ್ಲಿ, ಬಹುಶಃ ಪಂಜಾಬನ್ನು ಹೊರತುಪಡಿಸಿ, ಅದರ ಸಮಸ್ಯೆ ಕಳೆದ ಹತ್ತಾರು ದಿನಗಳಿಂದ ಉಲ್ಬಣಗೊಂಡಿರಲಿಲ್ಲ. ದೆಹಲಿಯಲ್ಲಂತೂ ನಾವು ಕೊರೊನಾದ ಮೇಲೆ ಹಿಡಿತವನ್ನು ಸಾಧಿಸಿ ಬಿಟ್ಟವೇನೂ ಎಂಬಂತಿತ್ತು. ಆದರೆ, ಇದನ್ನು ನಾನು ಬರೆಯುವ ಹೊತ್ತಿಗೆ ದೇಶದಾದ್ಯಂತ ತೊಂಬತ್ತು ಸಾವಿರಕ್ಕೂ ಹೆಚ್ಚಿನ ಕೊರೊನಾದ ಪ್ರಕರಣಗಳು ದಾಖಲಾಗಿವೆ. ಇದರಲ್ಲಿ ಹೆಚ್ಚಿನವು ಮಹಾರಾಷ್ಟ್ರದ್ದೆ. ಆದರೂ ದೆಹಲಿಯಲ್ಲಿ ಕಳೆದ ನಾಲ್ಕಾರು ದಿನಗಳಿಂದ ಕೊರೊನಾದ ಪ್ರಕರಣಗಳು ತೀವ್ರವಾಗಿ ಹೆಚ್ಚಾಗುತ್ತಿರುವುದು ನಮ್ಮೆಲ್ಲರ ಆತಂಕಕ್ಕೆ ಕಾರಣವಾಗಿದೆ. ಇವತ್ತಿನ ಲೆಕ್ಕಾಚಾರದ ಪ್ರಕಾರ ದೆಹಲಿಯಲ್ಲಿ ಸುಮಾರು ನಾಲ್ಕು ಸಾವಿರ ಪ್ರಕರಣಗಳು ಒಂದೇ ದಿನದಲ್ಲಿ ದಾಖಲಾಗಿವೆ. ಇನ್ನೂ ದೊಡ್ಡ ಚಿಂತಾಜನಕವಾದ ವಿಚಾರವೆಂದರೆ ಈ ದೆಹಲಿಯ ಪ್ರಕರಣಗಳ ಸಂಖ್ಯೆ ದಿನೇದಿನೇ ದುಪ್ಪಟ್ಟು ಹೆಚ್ಚಾಗುತ್ತಿದೆ. ಜೊತೆಗೆ ಕೊರೊನಾದಿಂದಾಗಿ ಮರಣ ಹೊಂದುವವರ ಸಂಖ್ಯೆಯೂ ಹೆಚ್ಚುತ್ತಿದೆ.

ಇದೇ ರೀತಿಯಲ್ಲಿ ಕೊರೊನಾದ ಹಾವಳಿ ದೆಹಲಿಯನ್ನು ಆವರಿಸತೊಡಗಿದರೆ ಇಲ್ಲಿನ ರಾಜ್ಯ ಸರಕಾರ ಕೆಲವೊಂದು ಬಿಗಿಯಾದ ಬಂಧನಗಳನ್ನು ಮುಂಬರುವ ದಿನಗಳಲ್ಲಿ ಜನರ ಮೇಲೆ ವಿಧಿಸುವುದು ಅನಿವಾರ್ಯವಾಗುವ ಎಲ್ಲ ಸಾಧ್ಯತೆಗಳು ಕಾಣುತ್ತಿವೆ. ದೆಹಲಿಯ ಸರಕಾರ ಲಾಕ್ ಡೌನ್ ಕುರಿತಾಗಿ ಹೆಚ್ಚಿನ ಆಸ್ಥೆ ಈಗ ತೋರಿಸದಿದ್ದರೂ ಪರಿಸ್ಥಿತಿ ಕೈಮೀರಿ ಹೋಗುವ ಸನ್ನಿವೇಶದಲ್ಲಿ ಬಹುಶಃ ಅದು ಸಹ ಅನಿವಾರ್ಯವಾಗಬಹುದು. ದೆಹಲಿಯಲ್ಲಿ ಈಗಾಗಲೆ ಶಾಲಾಕಾಲೇಜುಗಳನ್ನು ಮುಚ್ಚಲಾಗಿದೆ. ಅತ್ಯಂತ ಅವಶ್ಯವಿದ್ದರೆ ಮಾತ್ರ, ಅದರಲ್ಲೂ ಹಿರಿಯ ತರಗತಿಯ ವಿಧ್ಯಾರ್ಥಿಗಳು, ಶಾಲೆಗೆ ಹೋಗಬಹುದು. ಅದೇ ರೀತಿಯಲ್ಲಿ ಇತರ ನಿರ್ಭಂಧನೆಗಳು ನಿಧಾನವಾಗಿ ನಮ್ಮನ್ನೆಲ್ಲ ಆವರಿಸಿಕೊಳ್ಳುವ ಲಕ್ಷಣಗಳು ಕಾಣುತ್ತಿವೆ.

ಇಂತಹ ಸಂದರ್ಭದಲ್ಲಿ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆ ಮತ್ತು ಅದರಲ್ಲೂ ಮುಖ್ಯವಾಗಿ ಚುನಾವಣೆಗಳನ್ನು ಮಾಡುವುದು ಎಷ್ಟರ ಮಟ್ಟಿಗೆ ಸೂಕ್ತ ಎಂಬುದರ ಬಗ್ಗೆ ದೆಹಲಿ ಕನ್ನಡಿಗರಲ್ಲಿ ಚರ್ಚೆ ಪ್ರಾರಂಭವಾಗಿರುವದನ್ನು ನಾನು ಗಮನಿಸುತ್ತಿದ್ದೇನೆ. ಕೆಲ ಮಾನ್ಯ ಸದಸ್ಯರು ನನಗೆ ಲಿಖಿತ ರೂಪದಲ್ಲಿ ಈ ಕುರಿತಾಗಿ ತಮ್ಮ ವಿಚಾರಗಳನ್ನು ಸಾದರ ಪಡಿಸಿದ್ದಾರೆ. ಅವರೆಲ್ಲರ ಪ್ರಕಾರ ಈ ಕೊರೊನಾದ ಹೆಚ್ಚುತ್ತಿರುವ ಪ್ರಕರಣಗಳಿಂದಾಗಿ ಸರ್ವ ಸದಸ್ಯರ ಸಭೆ ಮತ್ತು ಚುನಾವಣಾ ಪ್ರಕ್ರಿಯೆಗಳಲ್ಲಿ ಹೆಚ್ಚಿನ ದೆಹಲಿ ಕರ್ನಾಟಕ ಸಂಘದ ಸದಸ್ಯರು ಭಾಗವಹಿಸುವ ಸಾಧ್ಯತೆಗಳಿಲ್ಲ. ಅದರಲ್ಲೂ ಸಂಘದ ಹಿರಿಯ ಸದಸ್ಯರು ತಮ್ಮ ಮತವನ್ನು ಚಲಾಯಿಸಲು ದೆಹಲಿ ಕನ್ನಡ ಶಾಲೆಯ ಆವರಣಕ್ಕೆ ಬರುವುದು ಅಸಾಧ್ಯವೇ ಸರಿ. ಸದ್ಯದ ಪರಿಸ್ಥಿತಿಯಲ್ಲಿ ದೆಹಲಿ ಸರಕಾರ ತೆರೆದ ಜಾಗೆಗಳಲ್ಲಿ (ಕ್ರೀಡಾಂಗಣಗಳು, ಉದ್ಯಾನವನಗಳು ಇತ್ಯಾದಿ ಜಾಗೆಗಳಲ್ಲಿ) ಇನ್ನೂರು ಜನರವರೆಗೆ ಸೇರುಬಹುದೆಂದು ತಾಕೀತು ಮಾಡಿತ್ತು. ಆದರೆ, ಸಭಾಂಗಣಗಳಲ್ಲಿ ನೂರು ಜನರಿಗಿಂತ ಹೆಚ್ಚು ಜನ ಸೇರುವಂತಿಲ್ಲ. ಈ ಎಲ್ಲ ಕೂಟಗಳಲ್ಲೂ ಕೊವಿಡ್ ನ ನಿಯಮಾವಳಿಗಳನ್ನು ಬಿಗುವಾಗಿ ಪಾಲಿಸವುದರ ಬಗ್ಗೆ ಈ ಸಭೆ-ಸಮಾರಂಭಗಳ ಆಯೋಜ-ಕರಿಗೆ ಸರಕಾರದ ಕಟ್ಟೆಚ್ಚರದ ಅಧಿಸೂಚನೆ ಈಗ ಜಾರಿಯಲ್ಲಿದೆ. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಕಾರ್ಯಕಾರಿ ಸಮಿತಿಯಲ್ಲಿ ನಾವು 'ತೆರೆದ' ಜಾಗೆಯಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಕಾರ್ಯಗತಗೊಳಿಸಬಹುದೆಂಬ (ಸರಕಾರದ ನಿಯಮಾವಳಿಗಳ ಪ್ರಕಾರ) ಉದ್ದೇಶದಿಂದ ದೆಹಲಿ ಕನ್ನಡ ಶಾಲೆಯ ಆವರಣದಲ್ಲಿನ ವಿಶಾಲ ಅಂಗಳವನ್ನು ಈ ಕಾರಣಕ್ಕಾಗಿ ಆಯ್ದುಕೊಂಡಿದ್ದೆವು. ಅದು ಎಲ್ಲರಿಗೂ ಒಪ್ಪಿಗೆಯಾದ ವಿಚಾರವಾಗಿತ್ತು. ಈಗಿನ ಕಾರ್ಯಕಾರಿ ಸಮಿತಿಯ ಕಾಲಾವಧಿ ಏಪ್ರಿಲ್ 13ರಂದು ಮುಕ್ತಾಯವಾಗುತ್ತಿರುವುದರಿಂದ ಚುನಾವಣಾ ಪ್ರಕ್ರಿಯೆಯನ್ನು ಪ್ರಾರಂಭಿಸಲೇ ಬೇಕಾಗಿತ್ತು. ಅದನ್ನು ನಾವು ಸಂಘದ ಸಂವಿಧಾನ ಮತ್ತು ನಿಯಮಾವಳಿಗಳ ಪ್ರಕಾರ ಮಾಡಿದ್ದೇವೆ, ಆದರೆ, ಹಲವು ಮಾನ್ಯ ಸದಸ್ಯರು ಈಗಿನ ಸ್ಫೋಟದಂತೆ ಪಸರಿಸತೊಡಗಿರುವ ಕೊರಾನಾದ ಹಾವಳಿಯ ಸಂದರ್ಭದಲ್ಲಿ ಸಂಘದ ಸಭೆ ಮತ್ತು ಚುನಾವಣೆಗಳನ್ನು ನಡೆಸುವುದು ಸೂಕ್ತವಲ್ಲವೆಂಬ ಅಭಿಪ್ರಾಯವನ್ನು ನೀಡಿದ್ದಾರೆ. ಇದಕ್ಕಾಗಿ ಸೇರುವ ನೂರಾರು ಸಂಘದ ಸದಸ್ಯರು ಕೊರೊನಾದ ಪ್ರಸರಣಕ್ಕೆ ಪಕ್ಕಾದರೆ ಅದರ ಜವಾಬ್ದಾರಿಯನ್ನು ಯಾರು ತೆಗೆದುಕೊಳ್ಳಬೇಕು ಎಂಬ ಪ್ರಶ್ನೆಯನ್ನು ಅವರೆಲ್ಲರೂ ಎತ್ತಿದ್ದಾರೆ. ನಾವು ಎಷ್ಟೇ ಮುಂಜಾಗರೂಕತಾ ಕ್ರಮಗಳನ್ನು ಕೈಗೊಂಡರೂ ಮತ್ತು ಸರಕಾರದ ಅನುಮತಿಯನ್ನು ಈ ಪ್ರಕ್ರಿಯೆಯನ್ನು ನಡೆಸಲು (ಅದು ಸಿಕ್ಕರೆ) ಪಡೆದುಕೊಂಡರೂ ಸಂಘದ ಸದಸ್ಯರನ್ನು ಈ ಬಗೆಯ ಅಪಾಯಗಳಿಗೆ ಒಡ್ಡುವುದು ಸರಿಯೇ ಎಂಬ ಪ್ರಶ್ನೆಯನ್ನು ಅವರು ಮುಂದಿಟ್ಟಿದ್ದಾರೆ. ಇದರಲ್ಲೆಲ್ಲಾ ಭಾಗವಹಿಸುವವರದ್ದು ಅವರದ್ದೆ ಆದ ಆಯ್ಕೆಗಳು ಅದಕ್ಕೆ ಸಂಘವನ್ನು ಹೊಣೆ ಮಾಡುವುದು ಸರಿಯಲ್ಲವೆಂದು ನಾವೆಲ್ಲ ಹೇಳಿಕೊಂಡರೂ ಈ ಮಾನ್ಯ ಸದಸ್ಯರು ಎತ್ತಿರುವ ಕಾಳಜಿಪೂರಿತ ವಿಚಾರಗಳನ್ನು ಗಂಭೀರವಾಗಿ ಚರ್ಚಿಸುವ ಅಗತ್ಯವಿದೆಯೆಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕು. ಬಹುಶಃ ಮುಂಬರುವ ದಿನಗಳಲ್ಲಿ ನಾವು ಈ ವಿಚಾರಗಳನ್ನು ಉದ್ಭವವಾಗುವ ಪರಿಸ್ಥಿತಿಗಳನ್ನು ಗಮನದಲ್ಲಿರಿಸಿಕೊಂಡು ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಚರ್ಚಿಸಬಹುದು.

ಮುಂದಿನ ದಿನಗಳು ನಮ್ಮ ದೇಶದ ಜನಸಮುದಾಯಗಳಿಗೆ ಸಾಕಷ್ಟು ಸಂಕಷ್ಟದ ದಿನಗಳಾಗಿಯೇ ಮುಂದುವರೆಯುವ ಲಕ್ಷಣಗಳು ಕಾಣುತ್ತಿವೆ. ದೇಶದ ಸುಮಾರು ಏಳು ಕೋಟಿ ಜನರಿಗೆ ಲಸಿಕೆಯನ್ನು ಹಾಕುವ ಕಾರ್ಯ ಯಶಸ್ವಿಯಾಗಿ ನಡೆದಿದ್ದು ಸಮಾಧಾನದ ಸಂಗತಿಯಾಗಿದೆ. ಈ ಲಸಿಕೆಯೆ ಈ ಕೊರೊನಾವನ್ನು ತಡೆಗಟ್ಟಲು ಇರುವ ದೊಡ್ಡ ಮದ್ದು ಎಂಬುದು ಸರಕಾರಗಳ ವಾದ. ಅದರ ಜೊತೆಗೆ ಮುಖಕವಚ, ಸಾಮಾಜಿಕ ಅಂತರ ಮತ್ತು ಎಲ್ಲ ಕೊವಿಡ್ ಕುರಿತಾದ ಎಚ್ಚರಿ-ಕೆಯ ಎಲ್ಲ ಪ್ರಣಾಳಿಕೆಗಳನ್ನು ಅನುಸರಿಸುವ ಕೆಲಸವನ್ನು ನಾವು ಮಾಡಬೇಕಿದೆ. ಮುಂದಿನ ಹಲವಾರು ವರ್ಷಗಳ ಕಾಲ ನಾವು, ಇಡಿ ಜಗತ್ತೆಲ್ಲ, ಹೊಸದಾದ ಜೀವನ ಶೈಲಿಗೆ ಒಗ್ಗಿಕೊಂಡು ಬದುಕಬೇಕಾದ ಅನಿವಾರ್ಯತೆ ಸೃಷ್ಟಿಯಾಗಿ ಹೋದದ್ದನ್ನು ನಾವೆಲ್ಲ ಪರಿಗಣಿಸಬೇಕಾಗಿದೆ.

***ಡಾ. ವೆಂಕಟಾಚಲ ಹೆಗಡೆ***
***ಅಧ್ಯಕ್ಷರು***



## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ, ದೆಹಲಿ ಕರ್ನಾಟಕ ಸಂಘದ ಸದಸ್ಯರೇ, ಪ್ರಸ್ತುತ ಕಾರ್ಯಕಾರಿ ಸಮಿತಿಯ ಅವಧಿ ಈ ತಿಂಗಳ 13ಕ್ಕೆ ಮುಕ್ತಾಯವಾಗುತ್ತಿದೆ. ಹೊಸ ಕಾರ್ಯಕಾರಿ ಸಮಿತಿ ಬರಬೇಕಿದೆ. ಹಾಗಾಗಿ ಈ ತಿಂಗಳ 18ರಂದು ಸಂಘದ ಆವರಣದಲ್ಲಿ ವಾರ್ಷಿಕ ಸರ್ವಸದಸ್ಯರ ಸಭೆ ಮತ್ತು 25ರಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಚುನಾವಣೆ ನಡೆಯಲಿದೆ. ಅತೀ ಹೆಚ್ಚು ಸದಸ್ಯರು ಚುನಾವಣೆಯಲ್ಲಿ ಭಾಗವಹಿಸಿ ಹೊಸ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಬೇಕಾಗಿ ತಮ್ಮಲ್ಲಿ ಪ್ರಾರ್ಥನೆ.

ಹೊಸ ಕಟ್ಟಡ ಬರುವ ಸಮಯದಲ್ಲಿ ಜಂಟಿ ಕಾರ್ಯದರ್ಶಿಯಾಗಿ ಕೆಲಸ ಮಾಡಿ 5 ಬಾರಿ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿ ಸತತವಾಗಿ ಹದಿನೆಂಟು ವರ್ಷ ಮೂರು ಅನುಭವಿ ಅಧ್ಯಕ್ಷರ ಜತೆಗೂಡಿ ಕೆಲಸವನ್ನು ಮಾಡಿರುವ ಪುಣ್ಯ ನನ್ನದಾಗಿದೆ. ಕರ್ನಾಟಕ ಸರ್ಕಾರ ಕನ್ನಡ ಸಂಸ್ಕೃತಿ ಇಲಾಖೆ, ಹೊರನಾಡಿನ ಸಂಘ ಸಂಸ್ಥೆಗಳ ಜೊತೆ ಅತ್ಯಂತ ಪ್ರೀತಿಪೂರ್ವಕವಾಗಿ ಕಾರ್ಯಕ್ರಮಗಳನ್ನು ಅತಿ ಹೆಚ್ಚು ಮಾಡುವಲ್ಲಿ ಯಶಸ್ವಿಯಾಗಿದ್ದೆನೆ. ಕನ್ನಡ ಶಾಲೆಯಲ್ಲಿ ಒಮ್ಮೆ ಅಧ್ಯಕ್ಷರಾಗಿದ್ದ ಸಮಯದಲ್ಲಿ ಸರವು ಕೃಷ್ಣ ಭಟ್‌ರವರು ಸ್ಮಾರ್ಟ್ ಕ್ಲಾಸ್‌ಗಳ ಬಳಕೆ ಕನ್ನಡ ಮಕ್ಕಳಿಗೆ ಅತಿ ಮುಖ್ಯ ಎಂದು ಪ್ರಸ್ತಾಪಿಸಿದಾಗ ಅದಕ್ಕೂ ಅಂದು ನಾನು ಒಪ್ಪಿಕೊಂಡೆ.. ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಪ್ರಸ್ತುತ ಸಮಿತಿ ಜತೆ ಸತತವಾಗಿ ಕೆಲಸ ಮಾಡಿ 25ಲಕ್ಷ ರೂ ಗಳಿಗಿಂತ ಹೆಚ್ಚು ದೆಹಲಿ ಕನ್ನಡ ವಿದ್ಯಾ ಶಿಕ್ಷಣ ಸಂಸ್ಥೆಗೆ ನೀಡಿ ಎಲ್ಲಾ ತರಗತಿಗಳಿಗೂ ಸ್ಮಾರ್ಟ್ ಕ್ಲಾಸ್ ಉಪಕರಣಗಳ ಅಳವಡಿಕೆ ಮಾಡಿ ಕಾರ್ಯರೂಪಕ್ಕೆ ತಂದಿರುವುದು ನನ್ನ ಭಾಗ್ಯ ಎಂದೇ ಭಾವಿಸುತ್ತೇನೆ. ಈ ಕಾರ್ಯಕ್ಕೆ ಕೈಜೋಡಿಸಿದ ಪ್ರಸ್ತುತ ಕಾರ್ಯಕಾರಿ ಸಮಿತಿಯ ಎಲ್ಲರಿಗೂ ನಾನು ಚಿರಋಣಿ. ಬರುವ ದಿನಗಳಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಸರ್ಕಾರದ ಜೊತೆಗೂಡಿ ಒಂದು ವಸತಿಗೃಹ ಮಾಡಬೇಕೆಂಬ ಅಭಿಲಾಷೆ ನನ್ನದಾಗಿದೆ. ಮಾನ್ಯ ಕೇಂದ್ರ ಮಂತ್ರಿಗಳು ಹಾಗೂ ರಾಜ್ಯಮಂತ್ರಿಗಳ ಸಂಪರ್ಕದಲ್ಲಿ ಇದ್ದೇನೆ. ಬರುವ ದಿನಗಳಲ್ಲಿ ಅದು ಆಗಬೇಕೆಂಬುದು ನನ್ನ ಅಭಿಲಾಷೆ, ನಿಮ್ಮೆಲ್ಲರ ಆಶೀರ್ವಾದ ಇರಲಿ..

ಈ ಬಾರಿಯ ಕ್ರಿಕೆಟ್ ಆಟೋಟ ಸ್ಪರ್ಧೆಗಳಲ್ಲಿ ಅತಿ ಹೆಚ್ಚು 15 ತಂಡಗಳು ಭಾಗವಹಿಸಿ ಯಶಸ್ವಿಯಾಗಿದೆ. ಮುಖ್ಯವಾಗಿ ಸಂಸದರಾದ ಸನ್ಮಾನ್ಯ ಪ್ರಜ್ವಲ್ ರೇವಣ್ಣ ಅವರು ಸಹ ಒಂದು ತಂಡದಲ್ಲಿ ಆಟವಾಡಿ ಆಟೋಟಗಳಿಗೆ ಪ್ರೋತ್ಸಾಹ ನೀಡಿ ಜೊತೆಗೆ ಎಲ್ಲ ಕನ್ನಡಿಗರ ಮನಗೆದ್ದಿದ್ದಾರೆ. ಇವರಿಗೂ ಸಹ ನಾನು ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ.

700 ರಿಂದ 800 ಜನರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿ ಮಾಡಿದ ತಮಗೆಲ್ಲರಿಗೂ ಕಬಡ್ಡಿ, ವಾಲಿಬಾಲ್, ಥ್ರೋಬಾಲ್, ಮತ್ತು ಕ್ರಿಕೆಟ್ ಈ ಎಲ್ಲಾ ತಂಡದಲ್ಲಿ ಭಾಗವಹಿಸಿದ ಆಟಗಾರರಿಗೆ ಅನಂತ ಧನ್ಯವಾದಗಳು. ಮುಖ್ಯವಾಗಿ ಇದಕ್ಕೆ ಸಹಕಾರ ನೀಡಿದ ಕಾರ್ಯಕಾರಿ ಸಮಿತಿ ಮತ್ತು ಕ್ರೀಡಾ ಸಮಿತಿಯ ಅಧ್ಯಕ್ಷರಾದ ಡಾ. ಎಂ ಎಸ್ ಶಶಿಕುಮಾರ್ ಮತ್ತು ಸಂಚಾಲಕರಾದ ಸಂತೋಷ ಜೆ, ಕಾರ್ಯಕಾರಿ ಸಮಿತಿಯ ಸದಸ್ಯರಾದ ಶಿವಪ್ಪ ಎಂ ಮತ್ತು ಎಲ್ಲಾ ಸದಸ್ಯರುಗಳಿಗೂ ಅನಂತ ಧನ್ಯವಾದಗಳು.

***ಸಿ.ಎಂ. ನಾಗರಾಜ***
***ಪ್ರಧಾನ ಕಾರ್ಯದರ್ಶಿ***

## ಶ್ರದ್ಧಾಂಜಲಿ


### ವಿ.ವಿ ಭಟ್



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ವಿ ವಿ ಭಟ್ ಅವರು ದಿನಾಂಕ 02.04.2021 ರಂದು ಹೃದಯಾಘಾತದಿಂದ ನಿಧನರಾಗಿದ್ದಾರೆ. ನಿವೃತ್ತ ಐ.ಎ.ಎಸ್. ಅಧಿಕಾರಿಗಳಾಗಿದ್ದ ವಿ.ವಿ.ಭಟ್ ಅವರು ದೆಹಲಿ ಸರಕಾರದ ಹಣಕಾಸು ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು. ದೆಹಲಿ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯ ನಿರ್ಮಾಣ ಸಂದರ್ಭದಲ್ಲಿ ದೆಹಲಿ ಸರಕಾರದಿಂದ 25 ಲಕ್ಷ ರೂ. ಧನಸಹಾಯವನ್ನು ಸಂಘ-ಕ್ಕೆ ಒದಗಿಸಿಕೊಟ್ಟಿದ್ದರು. ಸರಳ ಮತ್ತು ಸಜ್ಜನಿಕೆಗೆ ಹೆಸರಾಗಿದ್ದ ಭಟ್ ಅವರು ಸಂಘದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ಅಗಲಿದ ವಿ ವಿ ಭಟ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ

### ಚಿತ್ತರಂಜನ್ ದಾಸ್



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಚಿತ್ತರಂಜನ್ ದಾಸ್ ಅವರು ದಿನಾಂಕ 28.03.2021 ರಂದು ಹೃದಯಾಘಾತದಿಂದ ನಿಧನರಾಗಿದ್ದಾರೆ. ಚಿತ್ತರಂಜನ್ ದಾಸ್ ಅವರು ಆಕಾಶವಾಣಿಯ ವಾರ್ತಾ ವಾಚಕರಾಗಿ ಜನಪ್ರಿಯರಾಗಿದ್ದರು. ಕೆಲಕಾಲ 'ಶುಭ ನುಡಿ' ಹೆಸರಿನ ಪತ್ರಿಕೆಯನ್ನು ನಡೆಸುತ್ತಿದ್ದರು. ಇವರು ಸಂಘದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ಅಗಲಿದ ಚಿತ್ತರಂಜನ್ ದಾಸ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ

### ಪ್ರಭಾವತಿ



ದೆಹಲಿ ಕರ್ನಾಟಕ ಸಂಘದ ಮುಖವಾಣಿ ಅಭಿಮತ ಮುದ್ರಣಗೊಳ್ಳುತ್ತಿರುವ ಸೌಜನ್ಯ ಪ್ರಿಂಟಿಂಗ್ ಪ್ರೆಸ್‌ನ ಮಾಲಿಕ ಶ್ರೀ ವಿ.ಎನ್. ಹೆಗಣೆ ಅವರ ಧರ್ಮಪತ್ನಿ ಶ್ರೀಮತಿ ಪ್ರಭಾವತಿ ಅವರು ದಿನಾಂಕ 07.04.2021ರಂದು ನಿಧನರಾಗಿದ್ದಾರೆ.

ಅಗಲಿದ ಪ್ರಭಾವತಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ

# ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಕ್ರಿಕೆಟ್ ಪಂದ್ಯಾವಳಿ

ದೆಹಲಿ ಕರ್ನಾಟಕ ಸಂಘದ ವತಿಯಿಂದ ನಡೆಯುವ ವಾರ್ಷಿಕ ಆಟೋಟ ಸ್ಪರ್ಧೆಗಳಲ್ಲಿ ಒಂದಾದ ಕ್ರಿಕೆಟ್ ಪಂದ್ಯಾವಳಿಯನ್ನು 13.03.2021 ಮತ್ತು 14.03.2021 ರಂದು ದೆಹಲಿಯ ತಾಲ್ಕತೋರ ಕ್ರಿಕೆಟ್ ಮೈದಾನದಲ್ಲಿ ಆಯೋಜಿಸಲಾಗಿತ್ತು. ಈ ಪಂದ್ಯಾವಳಿಯಲ್ಲಿ ನಾಡಪ್ರಭು ಕೆಂಪೇಗೌಡ ಫೌಂಡೇಶನ್, ಜೆ.ಎಸ್.ಎಸ್. ಚಾಲೇಂಜರ್ಸ್, ಗೆಳೆಯರ ಬಳಗ, ಬೆಳ್ಳಿಯಪ್ಪಾಸ್ ಗ್ರೂಪ್-ಬಿ, ಕನ್ನಡ ಸಿರಿ ಗೆಳೆಯರು-2, ಕರ್ನಾಟಕ ಅಡ್ವೋಕೇಟ್ಸ್, ಶಿವ ಸಾಯಿ ಗ್ರೂಪ್ ಕ್ರಿಕೆಟ್ ಟೀಮ್, ಜನಕಪುರಿ ಕನ್ನಡ ಕೂಟ ಕ್ರಿಕೆಟ್ ಕ್ಲಬ್, ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್, ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್, ಜೆ.ಎಸ್.ಎಸ್.-ವಾರಿಯರ್ಸ್, ದೆಹಲಿ ತುಳುಸಿರಿ, ಕನ್ನಡ ಸಿರಿ ಗೆಳೆಯರು-1, ಕರ್ನಾಟಕ ಭವನ ಜೂನಿಯರ್ ಕ್ರಿಕೆಟ್ ಟೀಮ್ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್-ಎ ಸೇರಿದಂತೆ ಒಟ್ಟು ಹದಿನೈದು ತಂಡಗಳು ಭಾಗವಹಿಸಿದವು.

ಈ ಬಾರಿಯ ವಿಶೇಷತೆ ಏನೆಂದರೆ ಮಾನ್ಯ ಹಾಸನ ಲೋಕಸಭಾ ಸದಸ್ಯ ಪ್ರಜ್ವಲ್ ರೇವಣ್ಣ ಅವರು ಕನ್ನಡ ಸಿರಿ ಗೆಳೆಯರು-2 ತಂಡದಲ್ಲಿ ಭಾಗವಹಿಸಿ ಆಟವಾಡಿ ಕ್ರೀಡಾ ಸ್ಫೂರ್ತಿ ತೋರಿ ಉತ್ತಮ ಪ್ರದರ್ಶನ ನೀಡಿದರು.



ಕ್ರಿಕೆಟ್ ಪಂದ್ಯಾವಳಿ ವಿನ್ನರ್ – ಬೆಳ್ಳಿಯಪ್ಪಾಸ್ ಗ್ರೂಪ್

ಈ ಬಾರಿ ಬೆಳ್ಳಿಯಪ್ಪಾಸ್ ಗ್ರೂಪ್-ಎ ತಂಡವು ದೆಹಲಿ ಕರ್ನಾಟಕ ಸಂಘದ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು. ಹೊಸದಾಗಿ ಬಂದಂತಹ ಶಿವ ಸಾಯಿ ಗ್ರೂಪ್ ಕ್ರಿಕೆಟ್ ಟೀಮ್ ರನ್ನರ್ ಅಪ್ ಆಗಿ ಹೊರ ಬಂತು. ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ, ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಖಜಾಂಚಿ ಶ್ರೀಮತಿ ಆಶಾಲತಾ, ಕ್ರೀಡಾ ಸಮಿತಿಯ ಅಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್, ಸಂಚಾಲಕ ಸಂತೋಷ ಜೆ., ಜಂಟಿ ಕಾರ್ಯದರ್ಶಿಗಳಾದ ರಾಧಾಕೃಷ್ಣ ಮತ್ತು ಶ್ರೀಮತಿ ಪೂಜಾ ರಾವ್, ಕಾರ್ಯಕಾರಿ ಸಮಿತಿಯ ಸದಸ್ಯ ಶಿವಪ್ಪ ಎಂ., ಎನ್.ಆರ್. ಶ್ರೀನಾಥ್, ಶ್ರೀಮತಿ ಶೋಭಾ ಗೌಡ, ಟಿ.ಎಂ. ಮೈಲಾರಪ್ಪ ಮೊದಲಾದವರು ಉಪಸ್ಥಿತರಿದ್ದು ಪಂದ್ಯಾವಳಿಯ ಯಶಸ್ಸಿಗೆ ಸಹಕರಿಸಿದರು.

ಜೆ.ಎಸ್.ಎಸ್. ಚಾಲೇಂಜರ್ಸ್ ಮತ್ತು ನಾಡಪ್ರಭು ಕೆಂಪೇಗೌಡ ಫೌಂಡೇಶನ್ ನಡುವೆ ನಡೆದ ಮೊದಲ ಸುತ್ತಿನ ಪದ್ಯದಲ್ಲಿ ಟಾಸ್ ಗೆದ್ದ ಜೆ.ಎಸ್.ಎಸ್. ಚಾಲೇಂಜರ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ನಾಡಪ್ರಭು ಕೆಂಪೇಗೌಡ ಫೌಂಡೇಶನ್ ತಂಡವು ಜೆ.ಎಸ್.ಎಸ್. ಚಾಲೇಂಜರ್ಸ್ ತಂಡ-ಕ್ಕೆ 10 ಓವರ್‌ಗಳಲ್ಲಿ 71 ರನ್‌ಗಳ ಗುರಿಯನ್ನು ನೀಡಿತು. ನಾಡಪ್ರಭು ಕೆಂಪೇಗೌಡ ಫೌಂಡೇಶನ್ 23ರನ್‌ಗಳಿಂದ ಜಯ ಸಾಧಿಸಿತು. ನಾಡಪ್ರಭು ಕೆಂಪೇಗೌಡ ಫೌಂಡೇಶನ್‌ನ ಅಮೃತ್ ಅವರು ಪಂದ್ಯ ಪುರುಷೋತ್ತಮ ಪ್ರಶಸ್ತಿಗೆ ಪಾತ್ರರಾದರು.

ಬೆಳ್ಳಿಯಪ್ಪಾಸ್ ಗ್ರೂಪ್ ಬಿ ಮತ್ತು ಗೆಳೆಯರ ಬಳಗ ತಂಡಗಳ ನಡುವೆ ನಡೆದ ಎರಡನೇ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಗೆಳೆಯರ ಬಳಗ ತಂಡವು ಬೆಳ್ಳಿಯಪ್ಪಾಸ್ ಗ್ರೂಪ್ ಬಿ ತಂಡಕ್ಕೆ 63 ರನ್‌ಗಳ ಗುರಿಯನ್ನು ನೀಡಿತು. ಬೆಳ್ಳಿಯಪ್ಪಾಸ್ ಗ್ರೂಪ್ ಬಿ ತಂಡವು ಐದು ವಿಕೆಟ್‌ಗಳಿಂದ ಜಯ ಸಾಧಿಸಿ ಪರಮೇಶ್ವರ್ ಅವರು ಪಂದ್ಯ ಪುರುಷೋತ್ತಮರಾದರು.

ಕನ್ನಡ ಸಿರಿ ಗೆಳೆಯರು-2 ಮತ್ತು ಕರ್ನಾಟಕ ಅಡ್ವೋಕೇಟ್ಸ್ ತಂಡಗಳ ನಡುವೆ ನಡೆದ ಮೂರನೇ ಪಂದ್ಯದಲ್ಲಿ ಟಾಸ್ ಗೆದ್ದ ಕನ್ನಡ ಸಿರಿ ಗೆಳೆಯರು- 2 ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಅಡ್ವೋಕೇಟ್ಸ್ ತಂಡವು ಕನ್ನಡ ಸಿರಿ ಗೆಳೆಯರು-2 ತಂಡಕ್ಕೆ 69 ರನ್‌ಗಳ ಗುರಿಯನ್ನು ನೀಡಿತು. ಕನ್ನಡ ಸಿರಿ ಗೆಳೆಯರು-2 ತಂಡವು ಈ ಗುರಿಯನ್ನು ಸುಲಭವಾಗಿ ತಲುಪಿ ಎಂಟು ವಿಕೆಟ್‌ಗಳಿಂದ ಜಯ ಸಾಧಿಸಿತು. ಕನ್ನಡ ಸಿರಿ ಗೆಳೆಯರು -2 ತಂಡದ ಶ್ರೀಧರ್ ಅವರು ಪಂದ್ಯ ಪುರುಷೋತ್ತಮರಾದರು.

ಜನಕಪುರಿ ಕನ್ನಡ ಕೂಟ ಕ್ರಿಕೆಟ್ ಕ್ಲಬ್ ಮತ್ತು ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್ ತಂಡಗಳ ನಡುವೆ ನಡೆದ ನಾಲ್ಕನೇ ಪಂದ್ಯದಲ್ಲಿ ಮೊದಲು ಟಾಸ್ ಗೆದ್ದ ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಜನಕಪುರಿ ಕನ್ನಡ ಕೂಟ ಕ್ರಿಕೆಟ್ ಕ್ಲಬ್ ಸ್ಕೂಲ್ ತಂಡಕ್ಕೆ 42 ರನ್‌ಗಳ ಗುರಿಯನ್ನು ನೀಡಿತು. ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್ 9 ವಿಕೆಟ್‌ಗಳಿಂದ ಜಯ ಸಾಧಿಸಿತು. ಅದ್ಭುತ ಬ್ಯಾಟಿಂಗ್ ಮತ್ತು ಬೌಲಿಂಗ್ ಪ್ರದರ್ಶನದಿಂದ ಪಂದ್ಯ ಅಂಬಿಕೇಶ್ ಪಾಟೀಲ್ ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ಮತ್ತು ಜೆ.ಎಸ್.ಎಸ್. ವಾರಿಯರ್ಸ್ ತಂಡಗಳ ನಡುವೆ ನಡೆದ ಐದನೇ ಪಂದ್ಯದಲ್ಲಿ ಜೆ.ಎಸ್.ಎಸ್. ವಾರಿಯರ್ಸ್ ತಂಡವು ಟಾಸ್ ಗೆದ್ದು ಪೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂವ್ ತಂಡವು 59 ರನ್‌ಗಳ ಗುರಿಯನ್ನು ನೀಡಿತು. ಜೆ.ಎಸ್.ಎಸ್. ವಾರಿಯರ್ಸ್ ತಂಡವು ಜಯ ಸಾಧಿಸಿತು. ತಂಡದ ನಾಯಕ ಸುರೇಶ್ ಎಚ್.ಎಂ. ಅವರ ಅದ್ಬುತ ಬ್ಯಾಟಿಂಗ್ ಮತ್ತು ಬೌಲಿಂಗ್ ಪ್ರದರ್ಶನದಿಂದ ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಕಳೆದ ಬಾರಿಯ ವಿನ್ನರ್ ದೆಹಲಿ ತುಳು ಸಿರಿ ಮತ್ತು ಕನ್ನಡ ಸಿರಿ ಗೆಳೆಯರು-1 ತಂಡಗಳ ನಡುವೆ ನಡೆದ ಆರನೇ ಪಂದ್ಯದಲ್ಲಿ ಟಾಸ್ ಗೆದ್ದ ಕನ್ನಡ ಸಿರಿ ಗೆಳೆಯರು -1 ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ದೆಹಲಿ ತುಳು ಸಿರಿ ತಂಡ-ಕ್ಕೆ 37 ರನ್‌ಗಳ ಗುರಿಯನ್ನು ನೀಡಿತು. ದೆಹಲಿ ತುಳು ಸಿರಿ ತಂಡವು ಜಯ ಸಾಧಿಸಿತು. ದೆಹಲಿ



ತುಳು ಸಿರಿ ತಂಡದ ಮಂಜೇಶ್ ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಕರ್ನಾಟಕ ಭವನ ಜೂನಿಯರ್ ಕ್ರಿಕೆಟ್ ಟೀಮ್ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್-ಎ ತಂಡಗಳ ನಡುವೆ ನಡೆದ ಏಳನೇ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಬೆಳ್ಳಿಯಪ್ಪಾಸ್ ಗ್ರೂಪ್-ಎ ತಂಡವು ಕರ್ನಾಟಕ ಭವನ ಜೂನಿಯರ್ ಕ್ರಿಕೆಟ್ ಟೀಮ್ ತಂಡಕ್ಕೆ 123 ರನ್‌ಗಳ ಗುರಿಯನ್ನು ನೀಡಿತು. ಬೆಳ್ಳಿಯಪ್ಪಾಸ್ ಗ್ರೂಪ್-ಎ ತಂಡವು ಜಯ ಸಾಧಿಸಿತು. ತಂಡದ ನಾಯಕ ಸಿದ್ದಪ್ಪ ಕೆ.ಸಿ. ಅವರ ಅದ್ಭುತ ಬ್ಯಾಟಿಂಗ್ ಮತ್ತು ಬೌಲಿಂಗ್ ಪ್ರದರ್ಶನದಿಂದ ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಮೊದಲ ಸುತ್ತಿನ ಕ್ವಾಟರ್ ಫೈನಲ್ ಪಂದ್ಯಾಟವು ನಾಡಪ್ರಭು ಕೆಂಪೇಗೌಡ ಫೌಂಡೇಶನ್ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್-ಬಿ ತಂಡಗಳ ನಡುವೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಬೆಳ್ಳಿಯಪ್ಪಾಸ್ ಗ್ರೂಪ್-ಬಿ ತಂಡವು ನಾಡಪ್ರಭು ಕೆಂಪೇಗೌಡ ಫೌಂಡೇಶನ್ ತಂಡಕ್ಕೆ 56ರನ್‌ಗಳ ಗುರಿಯನ್ನು ನೀಡಿತು. ನಾಡಪ್ರಭು ಕೆಂಪೇಗೌಡ ಫೌಂಡೇಶನ್ ತಂಡವು ಒಂಭತ್ತು ವಿಕೆಟ್‌ಗಳಿಂದ ಜಯ ಸಾಧಿಸಿತು. ಅದ್ಬುತ ಬ್ಯಾಟಿಂಗ್ ಮಾಡಿದ ಹರ್ಷ ಎಂ.ಕೆ. ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು. ನಾಡಪ್ರಭು ಕೆಂಪೇಗೌಡ ಫೌಂಡೇಶನ್ ತಂಡವು ಸೆಮಿಫೈನಲ್ ಪ್ರವೇಶಿಸಿತು.

ಎರಡನೇ ಸುತ್ತಿನ ಕ್ವಾಟರ್ ಫೈನಲ್ ಪಂದ್ಯಾಟವು ಕನ್ನಡ ಸಿರಿ ಗೆಳೆಯರು -2 ಮತ್ತು ಶಿವ ಸಾಯಿ ಗ್ರೂಪ್ ಕ್ರಿಕೆಟ್ ಟೀಮ್ ತಂಡಗಳ ನಡೆವೆ ನಡೆಯಿತು. ಟಾಸ್ ಗೆದ್ದ ಶಿವ ಸಾಯಿ ಗ್ರೂಪ್ ಕ್ರಿಕೆಟ್ ಟೀಮ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕನ್ನಡ ಸಿರಿ ತಂಡವು ಶಿವ ಸಾಯಿ ತಂಡಕ್ಕೆ 70 ರನ್ ಗುರಿಯನ್ನು ನೀಡಿತು. ಶಿವ ಸಾಯಿ ತಂಡವು ಈ ಗುರಿಯನ್ನು ಬೆನ್ನಟ್ಟುವಲ್ಲಿ ಸಫಲವಾಯಿತು. ಅಮಿನ್ ಖಾಜ ಅವರ ಅದ್ಭುತ ಬ್ಯಾಟಿಂಗ್ ಪ್ರದರ್ಶನದಿಂದ ಪಂದ್ಯ ಪುರುಷೋತ್ತಮರೆನಿಸಿಕೊಂಡರು. ಶಿವ ಸಾಯಿ ತಂಡವು ಸೆಮಿ ಫೈನಲ್ ತಲುಪಿತು.

ಮೂರನೇ ಸುತ್ತಿನ ಕ್ವಾಟರ್ ಫೈನಲ್ ಪಂದ್ಯಾಟವು ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್ ಮತ್ತು ಜೆ.ಎಸ್.ಎಸ್. ವಾರಿಯರ್ಸ್ ತಂಡಗಳ ನಡುವೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಸ್ಕೂಲ್ ತಂಡವು ಜೆ.ಎಸ್.ಎಸ್. ವಾರಿಯರ್ಸ್ ತಂಡಕ್ಕೆ 38 ರನ್‌ಗಳ ಲಕ್ಷ್ಯವನ್ನು ನೀಡಿತು. ವಾರಿಯರ್ಸ್ ತಂಡವು 7 ವಿಕೆಟ್‌ಗಳಿಂದ ಜಯ ಸಾಧಿಸಿ ಸೆಮಿಫೈನಲ್ ತಲುಪಿತು. ಯೋಗೀಶ್ ಅವರ ಉತ್ತಮ ಬೌಲಿಂಗ್ ಪ್ರದರ್ಶನದಿಂದ ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ನಾಲ್ಕನೇ ಕ್ವಾಟರ್ ಫೈನಲ್ ಪಂದ್ಯಾಟವು ದೆಹಲಿ ತುಳು ಸಿರಿ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್-ಎ ತಂಡಗಳ ನಡುವೆ ನಡೆಯಿತು. ಟಾಸ್ ಗೆದ್ದು ಪೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.



ಕ್ರಿಕೆಟ್ ರನ್ನರ್‌ಅಪ್ – ಶಿವ ಸಾಯಿ ಗ್ರೂಪ್

ಮೊದಲು ಬ್ಯಾಟಿಂಗ್ ಮಾಡಿದ ದೆಹಲಿ ತುಳು ಸಿರಿ ತಂಡವು 74 ರನ್‌ಗಳನ್ನು ಗಳಿಸಿತು. ಬೆಳ್ಳಿಯಪ್ಪಾಸ್ ತಂಡವು ಈ ಗುರಿಯನ್ನು ಸುಲಭವಾಗಿ ತಲುಪಿ ಸೆಮಿಫೈನಲ್ ತಲುಪಿತು. ವಿನೋದ್ ಅವರ ಅದ್ಭುತ ಬ್ಯಾಟಿಂಗ್ ಮತ್ತು ಬೌಲಿಂಗ್ ಪ್ರದರ್ಶನದಿಂದ ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಮೊದಲ ಸೆಮಿಫೈನಲ್ ಪಂದ್ಯವು ನಾಡಪ್ರಭು ಕೆಂಪೇಗೌಡ ಫೌಂಡೇಶನ್ ಮತ್ತು ಶಿವ ಸಾಯಿ ಗ್ರೂಪ್ ಕ್ರಿಕೆಟ್ ಟೀಮ್ ತಂಡಗಳ ನಡುವೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ನಾಡಪ್ರಭು ತಂಡವು ಶಿವ ಸಾಯಿ ತಂಡಕ್ಕೆ 93 ರನ್‌ಗಳ ಗುರಿಯನ್ನು ನೀಡಿತು. ಅಮಿನ್ ಖಾಜ ಅವರ ಅದ್ಭುತ ಬ್ಯಾಟಿಂಗ್ ಪ್ರದರ್ಶನದಿಂದ ಶಿವ ಸಾಯಿ ಗ್ರೂಪ್ ಕ್ರಿಕೆಟ್ ಟೀಮ್ ತಂಡವು ಫೈನಲ್ ತಲುಪಿತು. ಅಮಿನ್ ಖಾಜ ಅವರು ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಎರಡನೇ ಸೆಮಿಫೈನಲ್ ಪಂದ್ಯವು ಜೆ.ಎಸ್.ಎಸ್. ವಾರಿಯರ್ಸ್ ಮತ್ತು ಬೆಳ್ಳಿಯಪ್ಪಾಸ್ ಗ್ರೂಪ್-ಎ ತಂಡಗಳ ನಡುವೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಬೆಳ್ಳಿಯಪ್ಪಾಸ್ ಗ್ರೂಪ್-ಎ ತಂಡವು ಜೆ.ಎಸ್.ಎಸ್. ತಂಡಕ್ಕೆ 66ರನ್‌ಗಳ ಗುರಿಯನ್ನು ನೀಡಿತು. ಜೆ.ಎಸ್.ಎಸ್. ತಂಡವು ಈ ಗುರಿಯನ್ನು ತಲುಪುವಲ್ಲಿ ವಿಫಲವಾಯಿತು. ಬೆಳ್ಳಿಯಪ್ಪಾಸ್-ಎ ತಂಡವು ಫೈನಲ್ ಪ್ರವೇಶಿಸಿತು.

ಹನ್ನೆರಡು ಓವರುಗಳ ಫೈನಲ್ ಪಂದ್ಯಾಟವು ಬೆಳ್ಳಿಯಪ್ಪಾಸ್ ಗ್ರೂಪ್-ಎ ಮತ್ತು ಶಿವ ಸಾಯಿ ಗ್ರೂಪ್ ಕ್ರಿಕೆಟ್ ಟೀಮ್ ತಂಡಗಳ ನಡುವೆ ನಡೆಯಿತು. ಮೊದಲು ಬ್ಯಾಟಿಂಗ್ ಮಾಡಿದ ಬೆಳ್ಳಿಯಪ್ಪಾಸ್ ಗ್ರೂಪ್-ಎ ತಂಡವು 12 ಓವರ್‌ಗಳಲ್ಲಿ 100 ರನ್‌ಗಳನ್ನು ಗಳಿಸಿತು. ಶಿವ ಸಾಯಿ ಗ್ರೂಪ್ ಕ್ರಿಕೆಟ್ ಟೀಮ್ ತಂಡವು ಈ ಗುರಿಯನ್ನು ತಲುಪುವಲ್ಲಿ ವಿಫಲವಾಯಿತು. ಬೆಳ್ಳಿಯಪ್ಪಾಸ್ ಗ್ರೂಪ್-ಎ ತಂಡವು ದೆಹಲಿ ಕರ್ನಾಟಕ ಸಂಘದ 2021 ನೇ ಸಾಲಿನ ಕ್ರಿಕೆಟ್ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು. ಬೆಳ್ಳಿಯಪ್ಪಾಸ್ ಗ್ರೂಪ್-ಎ ತಂಡದ ನಾಯಕ ಸಿದ್ದಪ್ಪ ಕೆ.ಸಿ. ಅವರ ಅದ್ಬುತ ಬೌಲಿಂಗ್ ಪ್ರದರ್ಶನದಿಂದ ಪಂದ್ಯ ಪುರುಷೋತ್ತಮರೆನಿಸಿಕೊಂಡರು.

ಬೆಳ್ಳಿಯಪ್ಪಾಸ್ ಗ್ರೂಪ್-ಎ ತಂಡದ ನಾಯಕ ಸಿದ್ದಪ್ಪ ಕೆ.ಸಿ. ಬೆಸ್ಟ್ ಬೌಲರ್ ಮತ್ತು ಆಲ್‌ರೌಂಡರ್ ಪ್ರಶಸ್ತಿಗೆ ಭಾಜನರಾದರು ಹಾಗೆಯೇ ಬೆಸ್ಟ್ ಬ್ಯಾಟ್ಸ್‌ಮನ್ ಪ್ರಶಸ್ತಿಯನ್ನು ಬೆಳ್ಳಿಯಪ್ಪ ಗ್ರೂಪ್-ಎ ತಂಡದ ಆಟಗಾರ ವಿನೋದ್ ತನ್ನದಾಗಿಸಿಕೊಂಡರು.

ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ಆಟವನ್ನು ಶಿಸ್ತುಬದ್ಧವಾಗಿ ನಡೆಸಲು ಸಹಕರಿಸಿದ ಎಲ್ಲಾ ಕ್ರೀಡಾಪಟುಗಳು ಮತ್ತು ನೆರೆದಿದ್ದ ದೆಹಲಿ ಮತ್ತು ಎನ್.ಸಿ.ಆರ್.ನ ಕನ್ನಡ ಕ್ರೀಡಾಭಿಮಾನಿಗಳಿಗೆ ಧನ್ಯವಾದ ಹೇಳಿದರು.

ಈ ಕರೋನಾ ಸಮಯದಲ್ಲಿ ಪಂದ್ಯಾವಳಿಯನ್ನು ಆಯೋಜಿಸಲು ಅನುಮತಿ ನೀಡಿದ ಅಧ್ಯಕ್ಷರು ಡಾ.ವೆಂಕಟಾಚಲ ಹೆಗಡೆ ಹಾಗೂ ಪ್ರಧಾನ ಕಾರ್ಯದರ್ಶಿ ಸಿ.ಎಂ.ನಾಗರಾಜ ಮತ್ತು ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರಿಗೆ ಹಾಗೂ ಕ್ರೀಡಾ ಸಮಿತಿಯ ಅಧ್ಯಕ್ಷರಾದ ಡಾ.ಎಂ.ಎಸ್.ಶಶಿಕುಮಾರ್ ಮತ್ತು ಸಮಿತಿಯ ಎಲ್ಲಾ ಸದಸ್ಯರಿಗೆ ವಿಶೇಷವಾಗಿ ಸಂಸದ ಪ್ರಜ್ವಲ ರೇವಣ್ಣ ಹಾಗೂ ಅಧಿಕ ಸಂಖ್ಯೆಯಲ್ಲಿ ಕ್ರೀಡಾಂಗಣ-ಕ್ಕೆ ಬಂದು ಪ್ರೋತ್ಸಾಹಿಸಿದ ದೆಹಲಿ ಕನ್ನಡಿಗರಿಗೆ ಧನ್ಯವಾದಗಳು ಸಲ್ಲಬೇಕು.

**ಸಂತೋಷ. ಜೆ.**
**ಕ್ರೀಡಾ ಸಮಿತಿ ಸಂಚಾಲಕ**

# ಕಬಡ್ಡಿ, ವಾಲೀಬಾಲ್ ಮತ್ತು ಥ್ರೋಬಾಲ್ ಪಂದ್ಯಾವಳಿ



ಕಬಡ್ಡಿ  ಹಾಗೂ ವಾಲಿಬಾಲ್ ವಿನ್ನರ್ – ಬೆಳ್ಳಿಯಪ್ಪಾಸ್ ಗ್ರೂಪ್

ದೆಹಲಿ ಕರ್ನಾಟಕ ಸಂಘದಿಂದ ಕಬಡ್ಡಿ, ವಾಲೀಬಾಲ್ ಮತ್ತು ಥ್ರೋಬಾಲ್ ಪಂದ್ಯಾವಳಿಯನ್ನು ದಿನಾಂಕ 21.03.2021ರಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿತ್ತು. ವಾಲೀಬಾಲ್ ಪಂದ್ಯಾವಳಿಯಲ್ಲಿ ಬೆಳ್ಳಿಯಪ್ಪ ಗ್ರೂಪ್ ವಿನ್ನರ್ ಹಾಗೂ ಕನ್ನಡ ಸಿರಿ ತಂಡ ರನ್ನರ್ ಅಪ್ ಆಗಿ ಜಯಶಾಲಿಯಾಯಿತು.

ಕಬಡ್ಡಿಯಲ್ಲಿ ಬೆಳ್ಳಿಯಪ್ಪ ಗ್ರೂಪ್ ವಿನ್ನರ್ ಹಾಗೂ ಶಿವಸಾಯಿ ಗ್ರೂಪ್ ರನ್ನರ್‌ಅಪ್ ಆಗಿ ಜಯಶಾಲಿಯಾಯಿತು.  ತುಳುಸಿರಿ ತಂಡ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ನಡುವೆ ಸ್ನೇಹಪೂರ್ವಕವಾಗಿ ನಡೆದ  ಮಹಿಳೆಯರ ಥ್ರೋಬಾಲ್ ಪಂದ್ಯಾವಳಿಯಲ್ಲಿ ತುಳುಸಿರಿ ತಂಡ ವಿಜಯ ಗಳಿಸಿತು.

ಈ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ತಂಡದ ಎಲ್ಲ ಕ್ರೀಡಾಪಟುಗಳು ಸ್ನೇಹ ಬಾಂಧವ್ಯದಿಂದ ಆಟವಾಡಿ, ನೆರೆದಿದ್ದ ಪ್ರೇಕ್ಷಕರನ್ನು ಮನರಂಜಿಸಿ ಕ್ರೀಡಾಸ್ಫೂರ್ತಿ ತೋರಿದರು.

ನೂರಾರು ಸಂಖ್ಯೆಯಲ್ಲಿ ಪ್ರೋತ್ಸಾಹಿಸಲು ಬಂದಿದ್ದ ದೆಹಲಿ ಕನ್ನಡಿಗರಿಗೆ ಧನ್ಯವಾದಗಳು ಸಲ್ಲಬೇಕು.

ಶಾಲೆಯ ಅವರಣವನ್ನು ನೀಡಿ ಎಲ್ಲ ರೀತಿಯಿಂದಲೂ ಸಹಕರಿಸಿದ ಶಿಕ್ಷಣ ಸಂಸ್ಥೆಗೆ ಹಾಗೂ ಶಾಲೆಯ ಸಿಬ್ಬಂದಿಗೆ ಕೃತಜ್ಞತೆಗಳು.

**ಸಂತೋಷ್. ಜೆ.**

**ಸಂಚಾಲಕರು, ಕ್ರೀಡಾ ಸಮಿತಿ**



ಕಬಡ್ಡಿ – ರನ್ನರ್‌ಅಪ್ ಶ್ರೀ ಶಿವಸಾಯಿ ಗ್ರೂಪ್



ವಾಲೀಬಾಲ್ – ಕನ್ನಡ ಸಿರಿ ತಂಡ ರನ್ನರ್‌ಅಪ್



## ನುಡಿ ನಮನ

# ಸರಳ ಸಜ್ಜನಿಕೆಯ ವಿ.ವಿ ಭಟ್



ಶ್ರೀಮತಿ ಶೀಲಾ ದೀಕ್ಷಿತ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅವರ ಸರಕಾರದಲ್ಲಿ Principal Secretary ( Finance ) ಆಗಿದ್ದ ಹಿರಿಯ ಐ ಎ ಎಸ್ ಅಧಿಕಾರಿ ಶ್ರೀ ವಿ ವಿ ಭಟ್ ಅವರು 2.4.21 ರ ಸಾಯಂಕಾಲ ನಾಲ್ಕು ಗಂಟೆಗೆ ಹೃದಯಾಘಾತದಿಂದ ಬೆಂಗಳೂರಲ್ಲಿ ನಿಧನರಾಗಿದ್ದಾರೆ. ಮೂಲತ: ಅವರು ದಕ ಜಿಲ್ಲೆಯ ವಿಟ್ಲದವರಾಗಿದ್ದರು.

ನಾನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷನಾಗಿದ್ದ ಅವಧಿಯಲ್ಲಿ (2004–2008) ಶ್ರೀ ಭಟ್ಟರು ದೆಹಲಿ ಸರಕಾರದ ದೆಹಲಿ ಕಲ್ಯಾಣ ಸಮಿತಿಯಿಂದ 25 ಲಕ್ಷ ರೂಗಳನ್ನು ಸಂಘದ ಸಾಂಸ್ಕೃತಿಕ ಸಮುಚ್ಚಯಕ್ಕೆ ಕೊಡಿಸಿದ್ದರು. ಜೊತೆಗೆ ಶ್ರೀ ಕಸ್ತೂರಿ ರಂಗನ್ ಅವರ ಎಂಪಿ ಲ್ಯಾಡ್ ನಿಂದ 15 ಲಕ್ಷಗಳನ್ನು ಕೊಡಿಸಿದ್ದರು. ಈ ಹಣದಿಂದ ಸಂಘಕ್ಕೆ ಲಿಫ್ಟ್ ಅಳವಡಿಸಲಾಯಿತು.

ತುಂಬಿದ ಕೊಡ ತುಳುಕುವುದಿಲ್ಲ ಎಂಬ ಮಾತಿಗೆ ಭಟ್ಟರು ಉದಾಹರಣೆಯಾಗಿದ್ದರು. ಸರಳ ಸಜ್ಜನಿಕೆಯ ಅವರ ನಿಧನವು ಅವರೊಡಗಿನ ಅನೇಕ ನೆನಪುಗಳನ್ನು ಮುನ್ನೆಲೆಗೆ ತರುತ್ತಿದೆ. ಅವರಿಗೆ ನಮನಗಳು.

**ಡಾ.ಪುರುಷೋತ್ತಮ ಬಿಳಿಮಲೆ**

## ಶ್ರದ್ಧಾಂಜಲಿ

# ಕೋದಂಡ ರಾಮಸ್ವಾಮಿ ನಿಧನ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಶ್ರೀ ಕೋದಂಡ ರಾಮಸ್ವಾಮಿ ಅವರು ದಿನಾಂಕ 01.04.2021ರಂದು ನಿಧನರಾಗಿದ್ದಾರೆ.

ಅವರು ರಸ್ತೆ ಅಪಘಾತದಲ್ಲಿ ವಿಧಿವಶರಾಗಿದ್ದಾರೆ ಎಂದು ತಿಳಿಸಲು ವಿಷಾಧಿಸುತ್ತೇವೆ.

ರಾಮಸ್ವಾಮಿ ಅವರು ಕೇಂದ್ರ ಜಲ ಆಯೋಗದಲ್ಲಿ ಸೇವೆ ಸಲ್ಲಿಸುತ್ತಿದ್ದರು. ಸಂಘದ ಕಾರ್ಯಕ್ರಮಗಳಲ್ಲಿ ಅವರು ಸಕ್ರಿಯರಾಗಿ ಭಾಗವಹಿಸುತ್ತಿದ್ದರು.

ಕೋದಂಡರಾಮ ಸ್ವಾಮಿ ಅವರ ನಿಧನಕ್ಕೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.


# ಬಡತನವನ್ನು ಮೆಟ್ಟಿನಿಂತು ಬದುಕಿದ ಚಿತ್ತರಂಜನ್

ಎ ವಿ ಚಿತ್ತರಂಜನ್ ದಾಸ್ ಇನ್ನಿಲ್ಲ.

ಸಣ್ಣ ವಯಸ್ಸಿನವರು ತೀರಿಕೊಂಡಾಗ ಬಹಳ ಸಂಕಟವಾಗುತ್ತದೆ. ಸುಳ್ಯ ಸಮೀಪದ ದೊಡ್ಡ ತೋಟದವರಾದ ಚಿತ್ತರಂಜನ್ ಸುಳ್ಯ ಕಾಲೇಜಲ್ಲಿ ನನ್ನ ವಿದ್ಯಾರ್ಥಿಯಾಗಿದ್ದರು. ಒಟ್ಟಿಗೇ ಯಕ್ಷಗಾನದಲ್ಲಿ ವೇಷ ಹಾಕುತ್ತಿದ್ದೆವು. ಉದ್ಯೋಗ ಹುಡುಕುತ್ತಾ ದೆಹಲಿ ಸೇರಿದ್ದರು. ಬಹಳ ವರ್ಷ ಆಕಾಶವಾಣಿಯಲ್ಲಿ ವಾರ್ತೆಗಳನ್ನು ಓದುತ್ತಿದ್ದರು. ಶುಭನುಡಿ ಹೆಸರಿನ ಪತ್ರಿಕೆಯನ್ನು ಬಹಳ ಕಾಲ ನಡೆಸಿ ಕೈ ಸುಟ್ಟುಕೊಂಡರು. ಅನುವಾದ ಕೆಲಸ ಮಾಡುತ್ತಾ ಇಬ್ಬರು ಹೆಣ್ಣು ಮಕ್ಕಳನ್ನು ದೆಹಲಿಯ ಒಳ್ಳೆಯ ಶಾಲೆಗಳಲ್ಲಿ ಓದಿಸಿದರು.

ವ್ಯವಸ್ಥೆಗೆ ಸದಾ ವಿರೋಧಿಯಾಗಿದ್ದ ಅವರು ನಾನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷನಾಗಿದ್ದಾಗ ನನ್ನ ಕಟು ವಿಮರ್ಶಕರಾಗಿದ್ದರು. ಅದು ನಮ್ಮ ಸ್ನೇಹ ಸಂಬಂಧವನ್ನೇನೂ ಹಾಳು ಮಾಡಿರಲಿಲ್ಲ.

ದೆಹಲಿಯಲ್ಲಿ ಅವರು ವಾಸವಾಗಿದ್ದ ಸ್ಥಳದ ಹೆಸರು ಚತ್ತರ್ ಪುರ. ಅಲ್ಲೊಂದು ಪ್ರಸಿದ್ಧ ದೇವಳವಿದೆ. ಆ ದೇವಾಲಯ ಮತ್ತು ಅದರ ಸುತ್ತಮುತ್ತ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದರೂ ದಾಸರು ಅಲ್ಲಿಗೆ ಹೋಗಿ ಕನ್ನಡ ಚಿತ್ರಗೀತೆಗಳನ್ನು ಹಾಡಿ ಪ್ರೇಕ್ಷಕರನ್ನು ರಂಜಿಸುತ್ತಿದ್ದರು. ದೆಹಲಿಗೆ ಬರುವ ಹಲವರಿಗೆ ತಮ್ಮ ಮನೆಯಲ್ಲಿ ವಾಸಕ್ಕೆ ಅವಕಾಶ ಮಾಡಿಕೊಡುತ್ತಿದ್ದರು. ದೆಹಲಿಯಲ್ಲಿ ಆಗಬೇಕಾಗಿದ್ದ ಕರ್ನಾಟಕದ ಹಲವರ ಕೆಲಸಗಳನ್ನು ತಾವೇ ಆಸ್ಥೆ ವಹಿಸಿ ಮಾಡಿಕೊಡುತ್ತಿದ್ದರು.



ಅವರು ತೀರಿಕೊಂಡರಂತೆ (28.03.21) ಎನ್ನುವ ಸುದ್ದಿ ಕೇಳಿ ಮನಸ್ಸನ್ನೆಲ್ಲಾ ವಿಷಾದ ಆವರಿಸಿಕೊಂಡಿದೆ. ನಮಗಿಂತ ಚಿಕ್ಕವರು, ಅದರಲ್ಲೂ ವಿದ್ಯಾರ್ಥಿಗಳಾಗಿದ್ದವರು ನಮಗಿಂತ ಮೊದಲೇ ಹೊರಟು ಹೋಗಬಾರದು.

ಬಡತನವನ್ನು ಮೆಟ್ಟಿನಿಂತು ಬದುಕಿದ ಚಿತ್ತರಂಜನ್‌ಗೆ ನಮನಗಳು.

**ಡಾ.ಪುರುಷೋತ್ತಮ ಬಿಳಿಮಲೆ**

# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ನಡೆದು ಬಂದ ದಾರಿ

ನಾವು ದೆಹಲಿಗೆ ಬರುವ ಮುಂಚೆಯೇ ದೆಹಲಿ ಯಾವ ಸ್ಥಿತಿಯಲ್ಲಿ ಮತ್ತು ಯಾರ ಆಡಳಿತದಲ್ಲಿತ್ತೆಂದು ತಿಳಿದುಕೊಳ್ಳುವುದು ಅತಿ ಅವಶ್ಯಕವಾಗಿದೆ. ಸುಲ್ತಾನರು, ಮೊಗಲರು, ಬ್ರಿಟಿಷರು ಭಾರತಕ್ಕೆ ಬರುವ ಮೊದಲು ಗುಪ್ತಾ ಸಾಮ್ರಾಜ್ಯ ಆಡಳಿತದಲ್ಲಿತ್ತು. ಆದರೆ ಆ ಸಮಯದಲ್ಲಿ ಯಾವ ತೊಂದರೆ ಇಲ್ಲದೆ ಪರಸ್ಪರ ಪ್ರೀತಿ ಗೌರವದಿಂದ ಕಾಲ ಕಳೆಯುತ್ತಿದ್ದರು. ಅದೊಂದು ಸುವರ್ಣ ಯುಗ ಎಂದು ಕರೆಯಬಹುದು. ಸುಲ್ತಾನರ ಪತನದ ನಂತರ ಮೊಗಲರು ಆಗಮಿಸಿ ತಮ್ಮ ಸಾಮ್ರಾಜ್ಯವನ್ನು ಬೆಳೆಸಲು ಪ್ರಾರಂಭ ಮಾಡಿದರು. ದೆಹಲಿ ರಾಜಕೀಯ ಸಾಂಸ್ಕೃತಿಕ ಮತ್ತು ವಾಣಿಜ್ಯ ನಗರವಾಗಿ ಬೆಳೆಯಿತು. ವ್ಯಾಪಾರ ಮಾಡಲು ಬಂದ ಇವರು 1649 ರಿಂದ 1857ರ ವರೆಗೆ ದೆಹಲಿ ತಮ್ಮ ರಾಜಧಾನಿಯನ್ನಾಗಿ ಆಡಳಿತ ನಡೆಸಿದರು. ನಂತರ ಬ್ರಿಟಿಷರು ತಮ್ಮ ಭದ್ರ ನೆಲೆ ಕಾಯುತ್ತಿದ್ದರು. ಇವರು ಕೂಡಾ ಈಸ್ಟ್ ಇಂಡಿಯಾ ಕಂಪನಿ ಸ್ಥಾಪಿಸಿ ದೇಶದ ಬಹು ಭಾಗವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಬ್ರಿಟಿಷರು ರಾಷ್ಟ್ರಪತಿ ಭವನ, ಪಾರ್ಲಿಮೆಂಟ್, ಶಾಸ್ತ್ರಿ ಭವನ, ಉದ್ಯೋಗ ಭವನ ಪ್ರಮುಖ ಕಚೇರಿಗಳು ಸ್ಥಾಪಿಸಿ ದೆಹಲಿ ಕೇಂದ್ರ ಆಡಳಿತ ಪ್ರದೇಶ ಮಾಡಿಕೊಂಡು ಕಾರ್ಯಭಾರ ನಡೆಸುತ್ತಿದ್ದರು. ಬಂಗಾರದ ಪಕ್ಷಿ ಎಂದೇ ಹೆಸರಾದ ಭಾರತ ದೇಶದ ಮುಗ್ಧ ಜನರನ್ನು ಮೋಸ ಮಾಡಿ ವಿಭಜಿಸಿ ಆಳಿ ದೇಶವನ್ನು ವಿಭಾಜನ ಮಾಡಲು ಪ್ರಯತ್ನ ಮಾಡಿದರು. ಮಹಾತ್ಮ ಗಾಂಧಿ, ಸರದಾರ ವಲ್ಲಭಭಾಯಿ ಪಟೇಲ್, ಸುಭಾಷ್‌ಚಂದ್ರ ಬೋಸ್, ಲಾಲ್ ಬಹದ್ದೂರ್ ಶಾಸ್ತ್ರಿ, ಪಂಡಿತ ಜವಾಹರಲಾಲ್ ನೆಹರು, ಮೌಲಾನಾ ಅಬ್ದುಲ್ ಕಲಾಂ ಅಜಾದ್, ಲಾಲಾ ಲಜಪತ್ ರಾಯರವರು ಬ್ರಿಟಿಷರ ವಿರುದ್ಧ ಹೋರಾಡಿ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟು ಮುಂದಿನ ಜನಾಂಗಕ್ಕೆ ದಾರಿ ದೀಪವಾಗಿದ್ದಾರೆ

ಎನ್.ಸಿ.ಆರ್. ಎಂದು ಕರೆಯಲ್ಪಡುವ ರಾಷ್ಟ್ರೀಯ ರಾಜಧಾನಿ ದೆಹಲಿಯ ನೊಯ್ಡಾ, ಗುರುಗ್ರಾಮ, ಫರಿದಾಬಾದ, ಗಾಜಿಯಾಬಾದಗಳನ್ನೊಳಗೊಂಡು ಜಗತ್ತಿನಲ್ಲಿಯೇ ಅತೀ ದೊಡ್ಡ ನಗರವಾಗಿದೆ. ನವದೆಹಲಿ ಇಂದು ಭಾರತದ ರಾಜಧಾನಿಯಾಗಿದೆ. ಕೆಂಪುಕೋಟೆ, ಕುತುಬ್‌ಮಿನಾರ್, ಅಕ್ಷರಧಾಮ ಮುಂತಾದ ಪ್ರೇಕ್ಷಣೀಯ ತಾಣಗಳಾಗಿವೆ. ವಿಶ್ವದ ರಾಯಭಾರಿಗಳ ಕಚೇರಿಗಳು, ಹೈಕೋರ್ಟು, ಸುಪ್ರೀಂಕೋಟು ಹಾಗೂ ಶಿಕ್ಷಣ ಸಂಸ್ಥೆಗಳು ಮಾನವಕುಲದ ಏಳಿಗೆಗೆ ದೆಹಲಿ ಕೇಂದ್ರ ಬಿಂದುವಾಗಿದೆ.

ಪ್ರಜಾಪ್ರಭುತ್ವದಲ್ಲಿ ರಾಜರ ರಾಜ್ಯಗಳು ಭಾರತದಲ್ಲಿ ವಿಲೀನಗೊಂಡವು. ಭಾಷಾವಾರು ಪ್ರಾಂತ್ಯದ ರಚನೆಯಾದಾಗ ಎಸ್.ವಿ. ಕೃಷ್ಣಮೂರ್ತಿಯವರು ರಾಜ್ಯಸಭೆಯ ಪ್ರಥಮ ಉಪಾಧ್ಯಕ್ಷರಾಗಿ ನೇಮಕರಾಗಿದ್ದರು. ದೆಹಲಿಯಲ್ಲಿ ವಾಸವಾಗಿರುವ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ತಮಿಳರು,




ತೆಲುಗರು, ಮಲೆಯಾಳಿ ಹಾಗೂ ಕನ್ನಡಿಗರಿಗೆ ತಮ್ಮ ತಮ್ಮ ಭಾಷೆಯ ಮಕ್ಕಳ ಶಿಕ್ಷಣ ಕೊಡಿಸಬೇಕಂದು ಪಾಲಕರು, ಆಯಾ ರಾಜ್ಯದ ಸರಕಾರಗಳು, ಕೇಂದ್ರ ಸರಕಾರದ ಜೊತೆಗೂಡಿ ಮಕ್ಕಳನ್ನು ಒಂದುಗೂಡಿಸಲು ಪ್ರಯತ್ನಪಟ್ಟರು. ದಿವಂಗತರಾದ ಕೆ.ಸಿ. ರೆಡ್ಡಿ, ಡಿ.ಪಿ. ಕರಮಕರ, ಸಿ.ಎನ್. ದಾತಾರ್, ಎಸ್. ನಿಜಲಿಂಗಪ್ಪರವರ ಪ್ರಯತ್ನದ ಫಲವಾಗಿ 1951ರಲ್ಲಿ ಸಂಸ್ಥೆಯ ಪದಾಧಿಕಾರಿಗಳು, ಗಣ್ಯರು, ಕೇಂದ್ರ ಹಾಗೂ ಕರ್ನಾಟಕ ಸರಕಾರದ ಸಹಾಯದಿಂದ 1.95 ಎಕರೆ ಜಮೀನು ಮಂಜೂರು ಪಡೆಯಲು ಸಹಾಯವಾಯಿತು.

ದೆಹಲಿಗೆ ಕೆಲಸಕ್ಕೆ ಬಂದ ಪಾಲಕರ ಮಕ್ಕಳನ್ನು ಒಂದುಗೂಡಿಸಲು ಪ್ರಯತ್ನಪಟ್ಟರು. ರಾಜ್ಯ ಸರಕಾರ ಹಾಗೂ ಮೈಸೂರು ಒಡೆಯರ ಅನುದಾನದಿಂದ ಕನ್ನಡ ಶಾಲೆಯ ಕಟ್ಟಡ ಪ್ರಾರಂಭ ಮಾಡಿದರು. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಗಮನದಲ್ಲಿಟ್ಟುಕೊಂಡು ಶಾಲೆಯ ಪ್ರಚಾರ ಮಾಡಲು ಒಂದು ಸಮಿತಿಯನ್ನು ರಚಿಸಲಾಯಿತು. 1959ರಲ್ಲಿ ಕನ್ನಡ ಶಾಲೆಯ ಶಿಕ್ಷಣ ಸಂಸ್ಥೆಯೊಂದು ಪ್ರಾರಂಭವಾಯಿತು. 1961ರಂದು ವಿಜಯ ದಶಮಿಯ ಶುಭ ಸಂದರ್ಭದಲ್ಲಿ 17 ಮಕ್ಕಳು ಮತ್ತು ನಾಲ್ಕು ಶಿಕ್ಷಕರೊಂದಿಗೆ ಮೂರು ತರಗತಿಗಳು ಪ್ರಾರಂಭಿಸಲಾಯಿತು. ಪ್ರಾರಂಭದಲ್ಲಿ ಕನ್ನಡ ಮಕ್ಕಳೇ ಹೆಚ್ಚಾಗಿ ಪ್ರವೇಶ ತೆಗೆದುಕೊಂಡು ಚೆನ್ನಾಗಿ ಓದಿ ಶಾಲೆಯ ಕೀರ್ತಿಗೆ ಭಾಜನರಾಗಿದ್ದಾರೆ. ಶಾಲೆ ಪ್ರಾರಂಭವಾದ ಮೂರು ವರ್ಷದಲ್ಲಿ 165 ಮಕ್ಕಳು, ನಾಲ್ಕನೇ ವರ್ಷದಲ್ಲಿ 365 ಹೀಗೆ ವರ್ಷದಿಂದ ವರ್ಷಕ್ಕೆ ಮಕ್ಕಳ ಸಂಖ್ಯೆ ಏರುತ್ತಲೇ ಇತ್ತು. ಇತ್ತೀಚಿನ ದಿನಗಳಲ್ಲಿ 1000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ.

ಶಾಲೆಯ ಫಲಿತಾಂಶ ಆಕರ್ಷಕವಾಗಿ ಕಾಣುತ್ತಿತ್ತು. ಪಾಲಕರ ಇಚ್ಛೆಯಂಥೆ ಕಲೆ, ವಾಣಿಜ್ಯ ಹಾಗೂ ವಿಜ್ಞಾನ ವಿಷಯಗಳನ್ನು ಪಿ.ಯು.ಸಿ.ಯವರೆಗೆ ಸೌಲಭ್ಯ ಒದಗಿಸಲು ಕ್ರಮ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಯಿತು. ಭಾಷಾ ಬಾಂಧವ್ಯ ಬೆಳೆಸಲು ಪ್ರಾಥಮಿಕ ಶಾಲೆ 1 ರಿಂದ 5ನೇ ತರಗತಿಯವರೆಗೆ ಕನ್ನಡ ಭಾಷೆ ಕನ್ನಡೇತರ ಹಾಗೂ ಕನ್ನಡ ಮಕ್ಕಳಿಗೂ ಕಡ್ಡಾಯ ಮಾಡಲಾಗಿದೆ. ಪಂಜಾಬ, ರಾಜಸ್ಥಾನ, ಉತ್ತರಪ್ರದೇಶ, ಹರಿಯಾಣ, ಗುಜರಾತ್ ರಾಜ್ಯದ ಮಕ್ಕಳು ಓದಿ ಉನ್ನತ ಹುದ್ದೆಯನ್ನು ಅಲಂಕರಿಸಿದ್ದಾರೆ. ನಮ್ಮ ಶಾಲೆಯ ಮಕ್ಕಳು ಇಂದು ದೇಶ ವಿದೇಶಗಳಲ್ಲಿ ಡಾಕ್ಟರ್, ಸರ್ಜನ್, ವಕೀಲ, ಜಡ್ಜ್, ಪತ್ರಕರ್ತ, ಸಿನಿಮಾ ಹಾಗೂ ನಾಟಕ ರಂಗದಲ್ಲಿ ಕೆಲಸ ಮಾಡಿ ಶಾಲೆಯ ಕೀರ್ತಿಗೆ ಪಾತ್ರರಾಗಿದ್ದಾರೆ. ರಾಷ್ಟ್ರೀಯ ಭಾವೈಕ್ಯತೆ ಹಾಗೂ ಭಾಷೆಯ ನೀತಿಯನ್ನು ಅನುಸರಿಸಿ ಹಿಂದಿ, ಇಂಗ್ಲಿಷ್, ಕನ್ನಡ, ಸಂಸ್ಕೃತವನ್ನು ಕಲಿಸುವ ಜವಾಬ್ದಾರಿಯನ್ನು ನಿರಂತರವಾಗಿ ನಿರ್ವಹಿಸುತ್ತಿದೆ. ಮಕ್ಕಳಿಗಾಗಿ ವಿಜ್ಞಾನ ಪ್ರಯೋಗಶಾಲೆ, ಗ್ರಂಥಾಲಯ, ಸ್ಕೂಲ್ ಬುಕ್ ಸ್ಟಾಲ್, ಸ್ಕೂಲ್ ಯೂನಿಫಾರ್ಮ್ ಕೂಡಾ ವ್ಯವಸ್ಥೆ ಮಾಡಲಾಗಿದೆ. ಪರಿಸರ ಸಂರಕ್ಷಣೆಗಾಗಿ ಇಕೋ ಕ್ಲಬ್ ಸ್ಥಾಪನೆ, ಯೂತ್ ಪಾರ್ಲಿಮೆಂಟ್ ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅವಿಭಾಜ್ಯ ಅಂಗವಾಗಿದೆ. ರಾಷ್ಟ್ರೀಯ ಭಾವೈಕ್ಯತೆ ಹಾಗೂ ಧೈರ್ಯ ತುಂಬುವ ಸೌಹಾರ್ಧತೆ ಮೂಡಿಸುತ್ತದೆ. ಕನ್ನಡ ಶಾಲೆಯು ಕೇಂದ್ರ ಸ್ಥಾನದಲ್ಲಿ ಇರುವುದರಿಂದ ಪರೀಕ್ಷೆ ಫಲಿತಾಂಶ ಆಕರ್ಷಕವಾಗಿರುವುದರಿಂದ ಮಕ್ಕಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ದೆಹಲಿ ಸರಕಾರದ ಸಹಯೋಗದಿಂದ ಶೇ. 95ರಷ್ಟು ಅನುದಾನ ದೊರೆಯುತ್ತಿದೆ. ಶಾಲೆಯ ಶಿಕ್ಷಕ ಶಿಕ್ಷಕಿಯರು ಒಟ್ಟು 43 ಹಾಗು ಇತರ 13 ಜನ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಶಾಲೆಯ ಮುಂದೆ ವಿಶಾಲವಾದ ಒಂದು ದೊಡ್ಡ ಮೈದಾನವಿದೆ.

ದೆಹಲಿ ಕರ್ನಾಟಕ ಸಂಘ, ಕರ್ನಾಟಕ ಭವನ, ಕನ್ನಡ ಶಾಲೆ ಆವರಣದಲ್ಲಿ ಆಟೋಟ ಸ್ಪರ್ಧೆಗಳು, ವಾರ್ಷಿಕ ಮಹಾಸಭೆ, ಚುನಾವಣೆ ಇತರ ಕನ್ನಡ ಚಟುವಟಿಕೆಗಳು ಬಹು ವಿಜೃಂಭಣೆಯಿಂದ ನಡೆಸಲಾಗುತ್ತದೆ. ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಹಾಗೂ 1 ರಿಂದ 12ನೇ ವರ್ಗದ ಪ್ರಥಮ, ದ್ವಿತೀಯ, ತೃತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದವರಿಗೆ ಪಾರಿತೋಷಕ, ಪ್ರಶಸ್ತಿ, ಪದಕ, ವಿದ್ಯಾರ್ಥಿ ವೇತನ ವಿತರಣೆ ಮಾಡಲಾಗುತ್ತದೆ. ಸ್ಥಗಿತಗೊಂಡ ಪಿಟಿಎ ಮತ್ತು ಎಂ.ಸಿ.ಎ. ಮತ್ತು ಸೌಲಭ್ಯಗಳನ್ನು ಒದಗಿಸಲು ಇಂದಿನ ಪದಾಧಿಕಾರಿಗಳು ಮುತುವರ್ಜಿಯಿಂದ ಕೆಲಸ ನಿರ್ವಹಿಸುತ್ತಿದ್ದಾರೆ. ದಿವಂಗತ ಎಸ್.ವಿ. ಕೃಷ್ಣಮೂರ್ತಿ ರಾವ್ ರಾಜ್ಯಸಭೆಯ ಉಪಾಧ್ಯಕ್ಷರು ಹಾಗೂ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ 1957 ರಿಂದ 1967ರವರೆಗೆ ಸತತ ಒಂಭತ್ತು ವರ್ಷಗಳ ಅವಧಿಯಲ್ಲಿ ಅಳಿದುಳಿದ ಎಲ್ಲಾ ಕೆಲಸಗಳು ಪೂರ್ಣಗೊಳಿಸಿ ಕನ್ನಡ ಮಕ್ಕಳ ಪ್ರೀತಿಗೆ ಪಾತ್ರಾಗಿದ್ದಾರೆ. ಇಂದು ವಸಂತ ಶೆಟ್ಟಿ ಬೆಳ್ಳಾರೆ 21ನೇಯ ಅಧ್ಯಕ್ಷರಾಗಿ, ಡಾ. ಎಂ.ಎಸ್. ಶಶಿಕುಮಾರ್ ಪ್ರಧಾನ ಕಾರ್ಯದರ್ಶಿ ಹಾಗೂ ಅವರ ತಂಡ ಕೋವಿಡ್-19 ಅವಧಿಯಲ್ಲಿಯೂ ದಿನಾಂಕ 05.07.2020ರಂದು ಸ್ವಾಗತ ಸಭಾಂಗಣ, ನವೆಂಬರ್ 1, ಕರ್ನಾಟಕ ರಾಜ್ಯೋತ್ಸವ ಈ ಶುಭ ಸಂದರ್ಭದಲ್ಲಿ ನವೀಕೃತ ಕೊಠಡಿ ಉದ್ಘಾಟನೆಯ ಮುಂದಾಲೋಚನೆಯ ಕಾರ್ಯಕ್ರಮಗಳು ಅತೀ ಜಾಗರೂಕತೆಯಿಂದ ಕೆಲಸ ನಿರ್ವಹಿಸತ್ತಿರುವುದು ದೆಹಲಿ ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ. ದಿವಂಗತ ಡಾ. ಬಿ.ಡಿ. ಜತ್ತಿ ಉಪರಾಷ್ಟ್ರಪತಿ ಆಫೀಸಿನಲ್ಲಿ 1974ರಂದು ಆಪ್ತ ಸಹಾಯಕನೆಂದು ಕೆಲಸ ಮಾಡುವ ಸೌಭಾಗ್ಯ ನನಗೆ ದೊರಕಿತು. ಆಗ ಪ್ರತಿದಿನ ಮಾನ್ಯ ಉಪರಾಷ್ಟ್ರಪತಿಯವರ ಮೊಮ್ಮಕ್ಕಳಾದ ಅಲ್ಲಮಪ್ರಭು, ರಾಜೆಪ್ಪ, ಶಿವಗಂಗಾ, ಲಲಿತಾ, ರಾಜಶೇಖರ ಮಹಾದೇವ ಅವರನ್ನು ಕರೆದೊಯ್ಯುವ ಜವಾಬ್ದಾರಿ ನನ್ನದಾಗಿತ್ತು. ಇದೇ ರೀತಿ ಅನೇಕ ಗಣ್ಯರ ಮಕ್ಕಳು ಸಹ ಓದಿ ದೇಶ ವಿದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಮಹಾದೇವ ಜತ್ತಿ ಮಣಿಪಾಲ ಆಸ್ಪತ್ರೆಯಲ್ಲಿ ಅರ್‌ಥೋಪಡಿಕ್ ಸರ್ಜನ್‌ರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮಾಜಿ ರಾಷ್ಟ್ರಪತಿಯವರ ಮೊಮ್ಮಕ್ಕಳು ಓದಿ ವಿವಿಧೆಡೆ ಕೆಲಸ ಮಾಡುತ್ತಿರುವುದು ಶ್ಲಾಘನೀಯ ವಿಷಯವಾಗಿದೆ. ಅಲ್ಲದೆ ದೆಹಲಿ ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ ಮತ್ತು ಶಾಲೆಯ ಘನತೆ ಗೌರವಗಳನ್ನು ಎತ್ತರಿಸಿದ್ದಾರೆ. ನಮ್ಮ ಶಾಲೆಯ ವರದಿ ಪ್ರಕಾರ ದಿವಂಗತ ಎಚ್. ಗುರುರಾಜ ರಾವ್ 1969ರಿಂದ ಪ್ರಾಂಶುಪಾಲ ಹುದ್ದೆಯನ್ನು ಅಲಂಕರಿಸಿ ಸತತ ಹತ್ತು ವರ್ಷಗಳ ಕಾಲ ಅವರು ಮಕ್ಕಳಿಗಾಗಿ ಮಾಡಿದ ಸೇವೆ ನಾನು ಸ್ವತಃ ನೋಡಿದ್ದೇನೆ. ರಾವ್ ಅವರ ಹಾಗೆ ಸರಳ ಸ್ಪಷ್ಟ ಸ್ವಭಾವದ ತ್ಯಾಗಮಯ ವ್ಯಕ್ತಿಗಳು ಸಿಗುವುದು ಅಪರೂಪ ಎಂದು ಹೇಳಬಹುದು. ನಂತರ ಬಂದ ದಿವಂಗತ ಎಸ್.ಡಿ. ಹಲಗೇಕರ, ದಿವಂಗತ ಜಿ.ಬಿ. ಹೆಗಡಿ ಕೆ.ಟಿ. ಗಣೇಶ ಕೂಡಾ ದೀನದಲಿತರ ಕಡು ಬಡವರ ಮಕ್ಕಳ ಮೇಲೆ ಅಪಾರ ಪ್ರೀತಿ ಪ್ರೇಮ ಸಹನೆ ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದರು. ನನ್ನ ಮಕ್ಕಳು ಮತ್ತು ಮೊಮ್ಮಕ್ಕಳಿಗೂ ಅಲ್ಲದೆ ಸುಮಾರು 50 ಕುಟುಂಬಕ್ಕಿಂತ ಹೆಚ್ಚು ಬಡ ಮಕ್ಕಳಿಗೆ ಉಚಿತ ಸಹಾಯ ಮಾಡಿದ ಪ್ರಿನ್ಸಿಪಾಲ್ ಹಾಗೂ ಪದಾಧಿಕಾರಿಗಳನ್ನು ಎಂದೂ ಮರೆಯಲಾರೆ.

ಇದೀಗ ಪ್ರಶಾಂತ ಕುಮಾರ್‌ರವರು 5ನೇ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸುತ್ತಿರುವ ಸರಳ ಸಜ್ಜನಿಯಕೆ ವ್ಯಕ್ತಿತ್ವದವರಾಗಿದ್ದಾರೆ. ಹೀಗಾಗಿ ಕನ್ನಡ ಶಾಲೆಯ ನಡೆದು ಬಂದ ದಾರಿಯಲ್ಲಿ ಕನ್ನಡಾಂಬೆಯ ಮಕ್ಕಳಾದ ನಾವು ಭಾರತದ ರಾಜಧಾನಿ ದೆಹಲಿಯಲ್ಲಿ ಕನ್ನಡದ ಸಂಸ್ಕೃತಿ ಅಳಿಸದೆ ಉಳಿಸುವ. ಇಲ್ಲಿನ ಪದಾಧಿಕಾರಿಗಳು, ಪ್ರಿನ್ಸಿಪಾಲರು, ಶಿಕ್ಷಕರು, ಸಿಬ್ಬಂದಿ ವರ್ಗ ಎಲ್ಲರು ಸತ್ಯ - ಶುದ್ಧ ಮನಸ್ಸಿನಿಂದ ಒಗ್ಗಟ್ಟಿನಿಂದ ದುಡಿಯುತ್ತಿದ್ದಾರೆ. ಈ ನಿಟ್ಟಿನಲ್ಲಿ ಕೆಲಸ ಮಾಡುವ ಎಲ್ಲರಿಗೂ ನನ್ನ ಶುಭ ಹಾರೈಕೆಗಳು.

**ವಿ.ವಿ. ಬಿರಾದಾರ**

# ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಕ್ಲಬ್ ಅಧ್ಯಕ್ಷೆಯಾಗಿ ಸರೋಜ ಮಾಧವ

ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಕ್ಲಬ್ ಅಧ್ಯಕ್ಷೆಯಾಗಿ ಸರೋಜ ಮಾಧವ ಆಯ್ಕೆಯಾಗಿದ್ದಾರೆ. ದಿನಾಂಕ 15.03.2021ರಂದು ಹಾಲಿ ಅಧಕ್ಷೆ ಶ್ರೀಮತಿ ರಂಗಮಣಿ ರಾವ್ ಮತ್ತು ಸಹ ಕಾರ್ಯದರ್ಶಿ ಶ್ರೀಮತಿ ಶೋಭಾ ಹನುಮೇಗೌಡರು ಹೊಸ ಸಮಿತಿಗೆ ತಮ್ಮ ಆಡಳಿತವನ್ನು ಹಸ್ತಾಂತರಿಸಿದರು.

ಹೊಸ ಆಡಳಿತ ಮಂಡಳಿ ಇಂತಿದೆ.

ಅಧ್ಯಕ್ಷೆ ಶ್ರೀಮತಿ ಸರೋಜ ಮಾಧವ, ಉಪಾಧ್ಯಕ್ಷೆ ಶ್ರೀಮತಿ ಪ್ರಫುಲ್ಲಾ ಶೆಟ್ಟಿ, ಕಾರ್ಯದರ್ಶಿಯಾಗಿ ಶ್ರೀಮತಿ ಲಕ್ಷ್ಮೀ ಕಿಣಿ, ಖಜಾಂಚಿಯಾಗಿ ಶ್ರೀಮತಿ ದೀನಾ ಜಾಯ್ಸ್, ಸಹ ಕಾರ್ಯದರ್ಶಿಯಾಗಿ ಶ್ರೀಮತಿ ರತ್ನ ಸಮಿತಿಯ ಸದಸ್ಯೆಯರಾಗಿ ಶ್ರೀಮತಿ ಪ್ರತಿಭಾ ಗೌಡ, ಶ್ರೀಮತಿ ಲಲಿತ ಸುದೇಶ, ಶ್ರೀಮತಿ ಶ್ರೀಲಕ್ಷ್ಮೀ, ಶ್ರೀಮತಿ ಜಯಾ ಆಚಾರ್, ಶ್ರೀಮತಿ ರಂಗಮಣಿ ರಾವ್, ಶ್ರೀಮತಿ ರಾಜೇಶ್ವರಿ ಕಲ್ಲೂರು ಆಯ್ಕೆಯಾದರು. ಎಲ್ಲರ ಶುಭ ಹಾರೈಕೆಗಳೊಂದಿಗೆ ಹೊಸ ಸಮಿತಿ ಸ್ನೇಹದಿಂದ ಚೆನ್ನಾಗಿ ನಡೆಸಿಕೊಂಡು ಬರುವುದಾಗಿ ಪಣತೊಟ್ಟರು.


ಸರೋಜಾ ಮಾಧವ


ಲಕ್ಷ್ಮೀ ಕಿಣಿ

# ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರಾಗಿ ಶಾಂತಕುಮಾರ್ ನಿಂಬಾಳ್

ಗುರುಗಾಂವ್ ಕನ್ನಡ ಸಂಘಕ್ಕೆ 2021-2023 ರ ಅವಧಿಗೆ ನೂತನ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ಆಯ್ಕೆಯಾಗಿದ್ದಾರೆ. ಅದರಂತೆ ಅಧ್ಯಕ್ಷ ಶಾಂತ ಕುಮಾರ್ ನಿಂಬಾಳ್, ಉಪಾಧ್ಯಕ್ಷ ರಾಜಕುಮಾರ್ ನೆಲ್ಲೂರ್, ಉಪಾಧ್ಯಕ್ಷೆ ಶ್ರೀಮತಿ ಶ್ರೀಲಕ್ಷ್ಮಿ ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಸಂತೋಷ ಜೆ, ಜಂಟಿ ಕಾರ್ಯದರ್ಶಿ ಶರಣಬಸಪ್ಪ, ಖಜಾಂಚಿ ಮರಿಬಸಪ್ಪ ಎಂ. ಕಾರ್ಯಕಾರಿ ಸಮಿತಿ ಸದಸ್ಯರಾಗಿ ಲಕ್ಷ್ ್ಮಣ್ ಕಟ್ಟಿಮನಿ, ಶ್ಯಾಮ್ ಗೋಗಿ, ಸಿದ್ದು ಸಾಹುಕಾರ್, ಗೋಪಾಲ್ ತಲ್ವಾರ್, ರಮೇಶ್ ಕೆ ಎಸ್, ಸೋಮಶೇಖರ್, ಅಪ್ಪಸಾಬ್ ಗೋಟೆ ಆಯ್ಕೆಯಾಗಿದ್ದಾರೆ.


ಶಾಂತ ಕುಮಾರ್ ನಿಂಬಾಳ್


ಸಂತೋಷ ಜೆ

# ಜ್ವಾಲಾಮುಖಿಯಂತಹ ಆತ್ಮಕಥೆ

ಈಚೆಗೆ ಪಂಜಾಬಿ ಲೇಖಕಿ ಅಜಿತ್ ಕೌರ್ ರಚಿಸಿದ ಆತ್ಮಕಥೆ 'ಅಲೆಮಾರಿಯೊಬ್ಬಳ ಆತ್ಮವೃತ್ತಾಂತ' ಓದಿದೆ. ಇದರಲ್ಲಿ ವಿಜಯಾ ಅವರಲ್ಲಿರುವಂತೆ (ಕುದಿಎಸರು) ಕೌಟುಂಬಿಕ ಹಿಂಸೆಯ ದಾರುಣ ಚಿತ್ರಗಳೇನಿಲ್ಲ; ಗೋದಾವರಿ ಪರುಳೇಕರ್ ಅವರಲ್ಲಿರುವಂತೆ (ಮಾನವ ಎಚ್ಚೆತ್ತಾಗ) ಚಳುವಳಿಯ ಭಾಗವಾಗಿ ಎದುರಿಸಿದ ಕಠೋರ ಸವಾಲುಗಳಿಲ್ಲ; ಅಮೃತಾ ಪ್ರೀತಮ್ ಅವರಲ್ಲಿರುವಂತೆ (ರಶೀದಿ ತಿಕೇಟು) ದೇಶ ವಿಭಜನೆಯ ಘೋರ ಘಟನೆಗಳಿಲ್ಲ; ಡಚ್‌ಲೇಖಕಿ ಓಹರ್ನ್ ಅವರಲ್ಲಿರುವಂತೆ (ಐವತ್ತು ವರ್ಷಗಳ ಮೌನ) ಲೈಂಗಿಕ ದಾಸ್ಯಕ್ಕೆ ಒಳಗಾಗಿ ಜಪಾನಿ ಸೈನಿಕರ ಬಲಾತ್ಕಾರಕ್ಕೆ ಸಿಲುಕಿದ ಎದೆಸೀಳುವ ಸ್ಮೃತಿಗಳೂ ಇಲ್ಲ. ಬದಲಾಗಿ ತನ್ನಿಚ್ಛೆಯಂತೆ ಬದುಕಲು ಬಯಸುವ ಒಬ್ಬ ಮಹಿಳೆ ಪ್ರೇಮದಲ್ಲಿ ವಿಫಲೆಯಾಗಿ, ತನಗೊಲ್ಲದ ಸಂಸಾರವನ್ನು ಒಗೆದು ಹೊರಬಂದು, ಲೇಖಕಿ– ಪತ್ರಕರ್ತೆಯಾಗಿ ಕಷ್ಟಪಟ್ಟು ಬದುಕನ್ನು ಕಟ್ಟಿಕೊಂಡ ಕೆಲವು ಬಿಡಿಚಿತ್ರಗಳಿವೆ. ಆದರೆ ಈ ಚಿತ್ರಗಳ ಒಳಗಿಂದ ಹೊಮ್ಮುವ ಧೀಮಂತಿಕೆ ಸಂವೇದನೆಗಳು ಮಾತ್ರ ಝಳಪಪಿಸುವ ಕತ್ತಿಗಳಂತೆ ಹರಿತವಾಗಿವೆ.


ಭಾರತೀಯ ಸಾಂಪ್ರದಾಯಿಕ ಸಮಾಜವು ಮಹಿಳೆಯರ ಬದುಕಿಗೆ ಕೆಲವು ಚೌಕಟ್ಟುಗಳನ್ನು ಒದಗಿಸುತ್ತದೆ. ಬಂಧನ ಮತ್ತು ಅಪಮಾನಸಹಿತ ಸುರಕ್ಷೆಯಿರುವ ಚೌಕಟ್ಟದು. ಆದರೆ ಇದಕ್ಕೆ ಅವರ ಸೃಜನಶೀಲ ಚೈತನ್ಯವನ್ನು ಚೂರುಚೂರು ಮಾಡುವ ಶಕ್ತಿಯಿದೆ. ದಿಟ್ಟೆಯರಾದ ಕೆಲವರು ಈ ಚೌಕಟ್ಟನ್ನು ಮುರಿದು ಹೊರಬರುವರು. ಇದರ ಫಲವಾಗಿ ಅಪಾರ ಕಷ್ಟವನ್ನೂ ಅಪರಿಮಿತ ಸ್ವಾತಂತ್ರ್ಯವನ್ನೂ ಅನುಭವಿಸುವರು. ವಿಜಯಾ, ಪ್ರತಿಭಾ ನಂದಕುಮಾರ್, ಉಮಾಶ್ರೀ, ಅಮೃತಾಪ್ರೀತಂ, ಕಮಲಾದಾಸ್ ಮುಂತಾದವರ ಆತ್ಮಕಥೆಗಳು ಇದಕ್ಕೆ ನಿದರ್ಶನ. ಈ ಸರಣಿಯಲ್ಲೇ ಬರುವ ಅಜಿತ್ ಕೌರರ ಆತ್ಮಕಥೆ ಹಲವು ಕಾರಣಗಳಿಂದ ವಿಶಿಷ್ಟವಾಗಿದೆ.

1. ಓದುಗರನ್ನು ತಲ್ಲಣಗೊಳಿಸುವಂತೆ ಘಟನೆಗಳನ್ನು ವಿವರಿಸುವ ವಿಶಿಷ್ಟ ಬಗೆ. ಲೇಖಕಿಯ ಮಗಳು ಸುಟ್ಟುಕೊಂಡು ಸಾಯುವ ಅಥವಾ ಲೇಖಕಿ ತನ್ನ ಪ್ರಿಯತಮನನ್ನು ಬೆನ್ನಹತ್ತಿಹೋಗುವ ಘಟನೆಗಳನ್ನು ಗಮನಿಸಬಹುದು. ಬಿರುಗಾಳಿಗೆ ಸಿಕ್ಕ ತರಗೆಲೆಯಂತೆ ಉದ್ವಿಗ್ನ ಓದುಗರನ್ನು ತನ್ನೊಟ್ಟಿಗೆ ಕರೆದೊಯ್ಯುವ ಕಸುವುಳ್ಳ ಶೈಲಿಯ ನಿರೂಪಣೆಯಿಲ್ಲಿದೆ. ತನ್ನ ಸಮಸ್ತ ಚೈತನ್ಯವನ್ನು ಬಸಿಯುವಂತೆ ಅಜಿತ್ ಬರೆಯುತ್ತಾರೆ.

2. ಬಾಲ್ಯದಿಂದ ಮುಪ್ಪಿನ ತನಕ ಬದುಕಿನ ವಿವಿಧ ಘಟ್ಟಗಳಲ್ಲಿ ಪಟ್ಟ ಅನುಭವಗಳನ್ನು ಕ್ರಮಬದ್ಧವಾಗಿ ದಾಖಲಿಸುವ ಚಾರಿತ್ರಿಕ ನಿರೂಪಣ ವಿಧಾನವನ್ನು ಬಿಟ್ಟುಕೊಡುವುದು; ಬದಲಿಗೆ ಬಾಳಿನ ಕೆಲವು ಘಟನೆಗಳನ್ನು ಆಯ್ದು ನಿರೂಪಿಸುವ ಹಾದಿಯನ್ನು ಹಿಡಿಯುವುದು. ಇಲ್ಲಿರುವ ಮುಖ್ಯ ಘಟನೆಗಳೆಂದರೆ– ಹದಿಹರೆಯದಲ್ಲಿ ತನ್ನ ಪ್ರಿಯ ಅಧ್ಯಾಪಕನನ್ನು ಪ್ರೇಮಿಸುವ ಕಥೆ, ಮಗಳು ಸುಟ್ಟುಕೊಂಡು ಸಾಯುವ ಘಟನೆ, ಗಂಡನ ಮನೆಯನ್ನು ಬಿಟ್ಟು ಲೇಖಕಿ ಹೊರನಡೆವುದು, ಹೊಸ ಪುರುಷನ ಪ್ರೇಮದಲ್ಲಿ ಅನುಭವಿಸುವ ಸುಖದುಃಖಗಳು, ಪರ್ತಕರ್ತೆಯಾಗಿ ಎದುರಿಸುವ ಬಿಕ್ಕಟ್ಟು, ಬಾಡಿಗೆ ಮನೆ ಪಡೆಯಲು ಮಾಡುವ ಸೆಣಸಾಟ ಇತ್ಯಾದಿ. ಇಂತಹ ಕೆಲವೇ ಪ್ರಸಂಗಗಳ ಮೂಲಕ ಸಾರ್ವಜನಿಕ ಬದುಕಿನಲ್ಲಿರುವ ಹೆಣ್ಣಬಾಳಿನ ತಲ್ಲಣಗಳನ್ನು ಅಜಿತ್ ಶಕ್ತವಾಗಿ ಕಾಣಿಸುವರು.

3. ವಿವರಗಳಿಗೆ ಹೋಗದೆ ಧ್ವನಿಪೂರ್ಣವಾದ ಸಂಕೇತ ಪ್ರತಿಮೆಗಳ ಮೂಲಕ ನಿರೂಪಿಸುವ ಪರಿ; ಕಥೆಯ ಭಾರವನ್ನು ಕಳೆದುಕೊಂಡು ಅನುಭವದ ಸೂಕ್ಷ್ಮ ಸ್ತರಗಳನ್ನು ಮುಟ್ಟಿ ಕಾಣಿಸುವಲ್ಲಿ ಸ್ವತಃ ಕಾವ್ಯವಾಗುವ ಗದ್ಯಭಾಷೆ. ವಿಷಾದಭರಿತವಾದ ಹರಿತವಾದ ವ್ಯಂಗ್ಯ; ನಾಟಕೀಯವಾದ ಈ ವ್ಯಂಗ್ಯದೊಳಗೆ ಹೆಣ್ಣಂವೇದನೆಯ ಮೌಲ್ಯಗಳನ್ನು ಕಾಣಿಸುವ ದಾರ್ಶನಿಕತೆ. ಉದಾಹರಣೆಗೆ ವಾಣಿಜ್ಯ ವ್ಯವಹಾರದ ಪತ್ರಿಕೆಯ ಸಂಪಾದಕಿಯಾಗಿದ್ದ ಲೇಖಕಿಯನ್ನು, ಆಕೆಗೆ ಸಲ್ಲಬೇಕಾದ ಪ್ರಕಾಶನದ ಖರ್ಚನ್ನು ಹಣವನ್ನು ಪಾವತಿಸದೆ, ಅಧಿಕಾರಶಾಹಿ ಮತ್ತು ರಾಜಕಾರಣಿಗಳು ಸತಾಯಿಸುವ ಪ್ರಕರಣ. 'ದುರ್ಘಟನೆಗಳ ಪರಿಷೆ' ಎಂಬ ಹೆಸರಿನ ಅಧ್ಯಾಯದಲ್ಲಿ ಇದು ನಿರೂಪಿತಗೊಂಡಿದೆ. ಇದು ಶುರುವಾಗುವುದು ಹೀಗೆ:

"ಗೆಳೆಯರೇ, ನಾನೊಂದು ಸ್ವಾರಸ್ಯಕರ ಘಟನೆಯ ಬಗ್ಗೆ ಹೇಳ್ತೀನಿ. ಮಾಮೂಲಿ ಘಟನೆಯಾದರೂ ವಿಚಲಿತಗೊಳಿಸುವಂಥದ್ದು. ಮುಖ್ಯ ಅಪರಾಧ 'ಹೆಣ್ಣಾಗಿರುವುದು'. ಎರಡನೆಯ ಅಪರಾಧ 'ಒಂಟಿಯಾದ ಹೆಣ್ಣು'. ಮೂರನೆಯ ಅಪರಾಧ 'ಏಕಾಂಗಿ ಮತ್ತು ತನ್ನ ರೊಟ್ಟಿಯನ್ನು ತಾನೇ ಗಳಿಸಬಲ್ಲ ಹೆಣ್ಣು'. ಮಹಾ ಅಪರಾಧ 'ತನ್ನ ರೊಟ್ಟಿಯನ್ನು ಖುದ್ದು ಗಳಿಸಬಲ್ಲ, ಬುದ್ಧಿವಂತೆ, ಸ್ವಾವಲಂಬಿಯಾದ ಈ ಒಂಟಿ ಹೆಣ್ಣುಮಗಳು, ದೇವತೆಗಳು ವಾಸಿಸುವ ಈ ಭಾರತದಲ್ಲಿರುವುದು. ಆದ್ದರಿಂದ ಗೆಳೆಯರೇ, ಮೊಟ್ಟಮೊದಲು ಮೇಲೆ ಉಲ್ಲೇಖಿಸಿದ ನಾಲ್ಕೂ ಅಪರಾಧಗಳನ್ನು ನಾನು ಸ್ವೀಕರಿಸುತ್ತೇನೆ. ಈ ಅಪರಾಧಗಳಲ್ಲದೇ ಇನ್ನೂ ಒಂದು ಅಪರಾಧವಿದೆ ದಯಾಳುಗಳೇ. ಅದು ಇಡೀ ಮಾನವಜಾತಿಗೆ ಅನ್ವಯಿಸುವಂಥದ್ದು. ಮತ್ತದು ಅಪರಾಧಗೈದ ಅಪರಾಧಿಯನ್ನು ಸುಮ್ಮನೆ ಬಿಡುವುದಿಲ್ಲ. ಅಪರಾಧಿಯಾದವ ಯಾರ ಅನುಕಂಪವನ್ನೂ ಬೇಡುವುದಿಲ್ಲ. ಅನುಕಂಪದ ಹಪಹಪಿಯೇ ಇರುವುದಿಲ್ಲ ಅವನಿಗೆ. ಇದ–ಕ್ಕೆ ವ್ಯತಿರಿಕ್ತವಾಗಿ 'ಅನುಕಂಪ' 'ಕರುಣೆ'ಯಂಥ ಜಿಡ್ಡುಲಡ್ಡಾದ ಪೊಳ್ಳುಪದಗಳೆಂದರೆ ಅಪರಾಧಿಗೆ ತಿರಸ್ಕಾರವಿರುತ್ತದೆ. ಆ ಅಪರಾಧಗಳೆಂದರೆ– ತನ್ನ ಶರುತ್ತುಗಳ ಮೇಲೆ ಬದುಕುವುದು. ತನ್ನ ಆತ್ಮಗೌರವದಲ್ಲಿ ತಲೆಯೆತ್ತಿ ಬಾಳುವುದು, ಸ್ವಾಭಿಮಾನದಿಂದ ಬಾಳುವುದು ಮತ್ತು ಲೋಕದ ಸಿದ್ಧಮಾದರಿಯ ಮೌಲ್ಯಗಳೊಂದಿಗೆ




ಪ್ರಕಾಶಕರು : ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
ದೂರವಾಣಿ : 09449174662
ಪುಟಗಳು : 216
ಬೆಲೆ : ರೂ.210/–
ವರ್ಷ : 2020

ರಾಜಿಯಾಗಲು ಅಥವಾ ಯಾವುದೇ ಶರತ್ತನ್ನು ಮನಸ್ಪೊಪ್ಪಿಕೊಳ್ಳದಿದ್ದಾಗ ಯಾವುದಕ್ಕೂ ರಾಜಿ ಮಾಡಿಕೊಳ್ಳದೇ ಇರುವುದು. ಅಂಥ ಅಪರಾಧಿಯನ್ನು ನಟ್ಟ ನಡುವೆ ನಾಲ್ಕು ದಾರಿ ಕೂಡುವಲ್ಲಿ ನೇಣುಗಂಬಕ್ಕೇರಿಸಬೇಕು ಸ್ನೇಹಿತರೇ"

4. ಸಹಜವಾದ ವಿವರಗಳನ್ನು ದಾರ್ಶನಿಕ ಅರ್ಥದಲ್ಲಿ ದುಡಿಸಿಕೊಳ್ಳುವುದು. ಚಿಕ್ಕಚಿಕ್ಕ ಮನೆ–ಹಾಸ್ಟೆಲುಗಳ ಖೋಲಿಗಳಲ್ಲಿ ಜೀವಿಸುವ ಲೇಖಕಿ ಕೊನೆಗೊಮ್ಮೆ ಇಷ್ಟಪಟ್ಟು ಹಿಡಿದ ಬಾಡಿಗೆ ಮನೆಯನ್ನು ವರ್ಣಿಸುವುದು ಹೀಗೆ:

"ವಿಶಾಲವಾದ ಮನೆ. ವಿಶಾಲವಾದ ಮನೆಯಲ್ಲಿ ಸುಳಿದಾಡುವ ರಾಶಿರಾಶಿ ಗಾಳಿ. ಆ ಮನೆಯಲ್ಲಿ ನಾವು ಆಗಂತುಕರಲ್ಲ. ನಮ್ಮದೇ ಮನೆಯೆಂದು ನುಸುಳುವ ಪೂರ್ತಿ ಬಿಸಿಲನ್ನು ಪೂರ್ತಿ ಬೆಳಕನ್ನು ನಿರುಮ್ಮಳವಾಗಿ ಆಸ್ವಾದಿಸುತ್ತಿದ್ದೆವು. ಪೂರಾ ಮನೆ, ಪೂರಾ ಮಾಳಿಗೆ ಮತ್ತು ಪೂರಾಪೂರಾ ನೀಲಿ ಆಕಾಶ. ಎಲ್ಲವೂ ನಮ್ಮದೇ! ಎದುರು ಚಾಚಿಕೊಂಡ ಹಸಿರು ಸಾಗರ ಮತ್ತು ಗಾಳಿಯಲ್ಲಿ ಮೆಲ್ಲಮೆಲ್ಲನೇ ಕಂಪಿಸುವ ಗಿಡಗಳು. ನಿಧಾನಕ್ಕೆ ಅವುಗಳ ಎತ್ತರ ನಮ್ಮ ಮಾಳಿಗೆಯವರೆಗೆ ಬೆಳೆಯುತ್ತಿತ್ತು. ಜೀವನದಲ್ಲಿ ಮೊದಲ ಭಾರಿ ಇಷ್ಟು ವಿಶಾಲ, ಇಂಥ ನೆಮ್ಮದಿಯ ಮನೆಯಲ್ಲಿದ್ದೆವು. ನಮ್ಮಿಬ್ಬರದೇ ಮನೆ–ಅಪರ್ಣಾ ಮತ್ತು ನನ್ನದು. ದೊಡ್ಡದೊಡ್ಡ ವಿಶಾಲ ಮನೆ ಲಾಹೋರಿನಲ್ಲೂ ಇತ್ತು. ಆದರೆ ಅದು ಅಪ್ಪಾಜಿಯದು. ಅಲ್ಲಿರುವ ಮತ್ತು ಇಲ್ಲದಿರುವ ಎಲ್ಲ ವಸ್ತುವೂ ಅಪ್ಪಾಜಿಯವರ ಇಚ್ಛೆಗನುಣವಾಗಿದ್ದವು. ಈ ಮನೆಯಲ್ಲಿ ಎಲ್ಲವೂ ನಾವು ಸದಾ ಕಾಲ ಬಯಸಿದವೇ ಆಗಿದ್ದವು. ಗಾಳಿ–ಬಿಸಿಲು, ಈ ಜಾಗ, ಸುಂದರ ವಸ್ತುಗಳು, ಸಂಗೀತ, ಪುಸ್ತಕ ಎಲ್ಲವೂ"

ಇದು ಕೇವಲ ಮನೆಯ ವರ್ಣನೆಯಲ್ಲ. ಸೃಜನಶೀಲ ಜೀವವೊಂದು ಸ್ವತಂತ್ರವಾಗಿ ಬದುಕಲು ಬೇಕಾದ ಸಾಮಾಜಿಕ ಆರ್ಥಿಕ





ಅವಕಾಶ ಕೂಡ ಎಂಬುದು ಓದುಗರಿಗೆ ಹೊಳೆಯುತ್ತದೆ. ಕುವೆಂಪು ರಾಷ್ಟ್ರೀಯ ಪುರಸ್ಕಾರ ಪಡೆದಿರುವ ಅಜಿತ್ ಕೌರ್, ಕುವೆಂಪು ಕಾದಂಬರಿಗಳಲ್ಲಿ ಬರುವ ಎಲ್ಲ ಮಹಿಳಾ ಪಾತ್ರಗಳ ಚೈತನ್ಯದ ಪ್ರತೀಕದಂತಿದ್ದಾರೆ. ಕುವೆಂಪು ಗೃಹಿಣಿಯನ್ನು ಕುರಿತು ರಚಿಸಿರುವ ಒಂದು ಪದ್ಯದಲ್ಲಿ 'ಹೊಸಲಾಚೆಗೆ ನೀ ಹೋದರೆ ಮನೆಯ ಬೆಳಕು ಆರಿಹೋಗುತ್ತದೆ? ಎಂಬರ್ಥದ ಮಾತುಗಳಿವೆ. ಆದರೆ ಅಜಿತ್ ಕೌರ್, ತನ್ನ ಧೀಮಂತ ಬದುಕನ್ನು ಹೊಸಿಲಾಚೆ ಕಾಲಿಟ್ಟೇ ಕಟ್ಟಿಕೊಂಡವರು. ಪಂಜಾಬಿನ ಲೇಖಕಿಂ–ಮರ ಆತ್ಮಕಥನಗಳಲ್ಲಿ ಅಲ್ಲಿನ ಪುರುಷಪ್ರಧಾನ ಸಮಾಜದ ತಣ್ಣನೆಯ ಕ್ರೌರ್ಯದ ಚಿತ್ರಗಳು ಸಾಮಾನ್ಯ ಅಮೃತಾ ಪ್ರೀತಂ ತಮ್ಮ ಆತ್ಮಕಥೆಗೆ 'ರೆವಿನ್ಯೂ ಸ್ಟಾಂಪ್' ಹೆಸರಿಡಲು ಕಾರಣ, ಅವರ ಜೀವನದ ಬಗ್ಗೆ ಕುಶವಂತ್‌ಸಿಂಗರು ಕುಹಕದಿಂದ ಆಡಿದ ಒಂದು ಮಾತು. ಬಹುಶಃ ಯೋಧ ಚಟುವಟಿಕೆ ಪ್ರಧಾನವಾಗಿರುವ ಸಮಾಜಗಳಲ್ಲಿ ಹೆಣ್ಣನ್ನು ಉಪಭೋಗದ ಸರಕಾಗಿ ನೋಡುವ ಗುಣ ದಟ್ಟವಾಗಿರುತ್ತದೆ. ಅದುವೇ ಇಂಥ ಸ್ತ್ರೀ ಸ್ವಾತಂತ್ರ್ಯ ವಾದಿಗಳನ್ನು ಕೂಡ ಪತ್ರಿಯಾಗಿ ಹುಟ್ಟಿಸುತ್ತದೆ. ಅಮೃತಾ ಮತ್ತು ಅಜಿತ್ ಇಬ್ಬರೂ, ಪಂಜಾಬಿ ಸಮಾಜದಲ್ಲಿದ್ದ ವಿವಾಹ–ಕುಟುಂಬ–ಪತಿನಿಷ್ಠೆ ಎಂಬ ಉಸಿರುಗಟ್ಟುವ ಸಾಂಪ್ರದಾಯಿಕ ಸಂಸ್ಥೆಗಳು ಕಂಗೆಡುವಂತೆ ಬದುಕಿದವರು. ಲಗ್ನವಾದ ಗಂಡನನ್ನು ಬಿಟ್ಟು ತಮ್ಮ ಜೀವಕ್ಕೆ ಮಿಡಿವ ಸಂಗಾತಿಗಳನ್ನು ಅರಸುತ್ತ ಹೋದವರು. ಆ ಸಂಗಾತಿಗಳ ಜತೆ ಮಾಡಿದ ಬಾಳುವೆಯನ್ನು ದಾಖಲಿಸಿದವರು. ಒಂಟಿ ಮಹಿಳೆಯರಾಗಿದ್ದು ತಮ್ಮ ಮಕ್ಕಳನ್ನು ಬೆಳೆಸಿದವರು.

ಈ ಆತ್ಮಕಥೆಯನ್ನು ದೆಹಲಿ ಕನ್ನಡತಿ ರೇಣುಕಾ ನಿಡಗುಂದಿ ಕನ್ನಡಿಸಿದ್ದಾರೆ. ಈ ಹಿಂದೆ ಅವರು ಅಮೃತಾ ಪ್ರೀತಮರ ನೆನಪುಗಳನ್ನು ಕನ್ನಡಕ್ಕೆ ಸಮರ್ಥವಾಗಿ ತಂದವರು. ಅವರಿಗೆ ಅಮೃತಾ ಅಜಿತ್ ಕೌರರಂತಹ ಪಂಜಾಬಿ ಲೇಖಕರ ಕುದಿ ವ್ಯಕ್ತಿತ್ವವನ್ನೂ, ಅವರ ಕಾವ್ಯಮಯ ಭಾಷೆ ಮತ್ತು ಸಂವೇದನ ಸೂಕ್ಷ್ಮತೆಯನ್ನೂ ಹಿಡಿದುಕೊಡುವ ಕುಶಲತೆ ದಕ್ಕಿದೆ. ಈ ಕೃತಿ ಮಹಿಳಾ ಸಂವೇದನೆಯ ಕೃತಿಗಳನ್ನು ಪ್ರಕಟಿಸುವುದಕ್ಕೆ ಖ್ಯಾತವಾಗಿರುವ ಅಹರ್ನಿಶಿ ಪ್ರಕಾಶನದಿಂದ ಬಂದಿರುವುದು ಉಚಿತವಾಗಿದೆ. ಪಂಜಾಬಿನ ಅಜಿತ್‌ಕೌರ್, ಧಾರವಾಡದ ರೇಣುಕಾ, ತೀರ್ಥಹಳ್ಳಿಯ ಅಕ್ಷತಾ–ಎತ್ತಣಿಂದೆತ್ತ ಸಂಬಂಧ?

ಕೃಪೆ: ನ್ಯಾಯಪಥ 17.3.2021


**ಡಾ.ರಹಮತ್ ತರಿಕೆರೆ**

# ಡಾ.ಬಿಳಿಮಲೆ ಅವರ 'ಅಮರ ಸುಳ್ಯದ ರೈತ ಹೋರಾಟ'

ಅಮರ ಸುಳ್ಯದ ರೈತ ಹೋರಾಟ (1834–1837) ಡಾ.ಪುರುಷೋತ್ತಮ ಬಿಳಿಮಲೆ ಅವರ ಹೊಸ ಕೃತಿ.

ಭಾರತೀಯ ರೈತರಿಗೆ ಭೂಮಿ ಎಂಬುದು ಒಂದು ಭಾವನಾತ್ಮಕ ವಿಷಯ. ಅವರದನ್ನು ಹುಟ್ಟು, ಮದುವೆ, ಸಾವು ಮಾತ್ರವಲ್ಲದೆ, ತಾವು ನಂಬಿದ ದೈವಗಳೊಂದಿಗೂ ಗಾಢವಾಗಿ ಬೆಸೆದುಕೊಂಡಿದ್ದಾರೆ. ಇದನ್ನು ತಿಳಿಯದ ಪ್ರಭುತ್ವವು ತನ್ನ ಲಾಭಕ್ಕೆ ನೆಲವನ್ನು ವ್ಯಾಪಾರದ ಸರಕನ್ನಾಗಿ ಪರಿವರ್ತನೆಗೊಳಿಸಿದಾಗಲೆಲ್ಲಾ ರೈತರು ಅಂತ ಪ್ರಕ್ರಿಯೆಗಳನ್ನು ತೀವ್ರವಾಗಿ ಪ್ರತಿಭಟಿಸಿದ್ದಾರೆ.

ಈ ಗ್ರಹಿಕೆಯ ಹಿನ್ನೆಲೆಯಲ್ಲಿ ಬರೆಯಲಾದ ಪ್ರಸ್ತುತ ಪುಸ್ತಕವು ಸುಳ್ಯ ಮತ್ತು ಕೊಡಗಿನ ರೈತರು ಈಸ್ಟ್ ಇಂಡಿಯಾ ಕಂಪೆನಿಯು ಜಾರಿಗೆ ತಂದ ಹೊಸ ಕಂದಾಯ ವ್ಯವಸ್ಥೆಯ ವಿರುದ್ಧ 1834 ರಿಂದ 1837ರವರೆಗೆ ನಡೆಸಿದ ದಿಟ್ಟ ಹೋರಾಟವನ್ನು ವಿವರಿಸುತ್ತದೆ. ಕಂಪೆನಿ ಸರಕಾರದ ಪ್ರಬಲ ಸೈನಿಕ ವ್ಯವಸ್ಥೆಯ ವಿರುದ್ಧ ಸಾಮಾನ್ಯ ಜನರು ಸಂಘಟಿತಗೊಂಡ ರೀತಿ, ವೈರಿಯನ್ನು ಮಣಿಸಲು ಅನುಸರಿಸಿದ ಗೆರಿಲ್ಲಾ ಮಾದರಿಯ ತಂತ್ರಗಳು, ಅನನ್ಯವಾದ ದೈವೀಕರಣ, ನಕಲೀಕರಣ ಪ್ರಕ್ರಿಯೆಗಳು ಪ್ರಾಂತೀಯ ರೈತ ಹೋರಾಟಗಳ ಇತಿಹಾಸದಲ್ಲಿ ದಾಖಲಾಗಬೇಕಾದ ಮಹತ್ವದ ಸಂಗತಿಗಳಾಗಿವೆ.




ಪ್ರಕಾಶಕರು : ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
ದೂರವಾಣಿ : 09449174662
ಪುಟಗಳು : 110
ಬೆಲೆ : ರೂ.100/–

# ಮಹಿಳಾ ಸಬಲೀಕರಣಕ್ಕೆ ಶರಣರ ಪಾತ್ರ ಮಹತ್ವಪೂರ್ಣ

**-ಸಂಸದೆ ಸುಮಲತಾ ಅಂಬರೀಶ್.**

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ದೆಹಲಿ ಪ್ರದೇಶ ಘಟಕ ದಿನಾಂಕ 27.03.2021ರಂದು ಹಮ್ಮಿಕೊಂಡಿದ್ದ "ವಚನಕಾರರಲ್ಲಿ ಗಂಡು ಹೆಣ್ಣಿನ ಸಂವಾದ" ಎಂಬ ಆನ್‌ಲೈನ್ ಉಪನ್ಯಾಸ ಮಾಲಿಕೆ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಬಹುಭಾಷಾ ತಾರೆ ಹಾಗೂ ಮಂಡ್ಯ ಜಿಲ್ಲೆಯ ಸಂಸದರಾದ ಶ್ರೀಮತಿ ಸುಮಲತಾ ಅಂಬರೀಶ್ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.


ಸಬಲೀಕರಣ ಎಂಬ ವಿಷಯ ಬಂದಾಗ ಹೆಣ್ಣು ಕೇವಲ ಸಮಾನಳಲ್ಲ ಹೊರತಾಗಿ ಅವಳು ಸಮಾಜದಲ್ಲಿ ಅತಿ ಹೆಚ್ಚು ಶಕ್ತಿಯುತಳಾಗಿದ್ದಾಳೆ. ಆದರೆ ಎಷ್ಟೋ ವೇಳೆ ಹೆಣ್ಣಿನ ಆ ಅಸಾಧಾರಣ ಗುಣವನ್ನು ಯಾರು ಗುರುತಿಸಿ ಬೆಳಕಿಗೆ ತರುವದಿಲ್ಲ, ಮಂಡ್ಯದ ಚುನಾವಣೆ ಸಮಯದಲ್ಲಿ ನನಗೂ ಕೂಡ ಬಹಳ ಚಾಲೆಂಜಿಂಗ್ ವಿಷಯವಾಗಿತ್ತು ಆದರೆ ಜನರ ಸೇವಾ ದೃಷ್ಟಿಯಿಂದ ಅದನ್ನು ನಾನು ದಕ್ಷವಾಗಿ ನಿಭಾಯಿಸಿದೆ. ಇವತ್ತು ನಾನು ಪ್ರತಿನಿಧಿಸುವ ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯಿಂದ ಹಿಡಿದು ತಾಲ್ಲೋಕು ಮಟ್ಟದ ಪ್ರತಿ ಉನ್ನತ ಹುದ್ದೆಯಲ್ಲಿ ಮಹಿಳೆಯರೇ ಇದ್ದಾರೆ. ನಾವು ಸಮಾಜದ ಎಲ್ಲ ಜವಾಬ್ದಾರಿಯೊಂದಿಗೆ ನಮ್ಮ ಕುಟುಂಬವನ್ನು ಸಹ ಪಾಲನೆ ಮಾಡುತ್ತಾ ಹೋಗುತ್ತಿದ್ದೇವೆ, ಇಂತಹ ಶಕ್ತಿ ಇರುವದು ಕೇವಲ ಹೆಣ್ಣಿನಲ್ಲಿ ಮಾತ್ರ, ಯುರೋಪಿನ ಲಂಡನ್ನಿನಲ್ಲಿರುವ ವಿಶ್ವಗುರು ಬಸವಣ್ಣನವರ ಪ್ರತಿಮೆ ಬಳಿ ಬೇಟಿ ನೀಡಿದಾಗ ನಾನು ನಮ್ಮ ಹನ್ನೆರಡನೇ ಶತಮಾನದಲ್ಲಿ ನಡೆದ ಸಮಾಜ ಸುಧಾರಣೆ ಮತ್ತು ಸಮಾನತೆಗಳ ಬಗ್ಗೆ ಮತ್ತು ವಚನಕಾರರು ಮಾಡಿದ ಕ್ರಾಂತಿಯ ಬಗ್ಗೆ ತಿಳಿದು ಅದರಿಂದ ಅಪಾರವಾಗಿ ಪ್ರಭಾವಿತಳಾದೆ. ಆದರೆ ವಿಪರ್ಯಾಸವೇನೆಂದರೆ ಅವರು ಹನ್ನೆರಡನೇ ಶತಮಾನದಲ್ಲಿ ಆಡಿದ ಮಾತಗಳನ್ನು ಇವತ್ತಿಗೂ ಸಹ ನಾವು ಪಾಲಿಸಲಾಗುತ್ತಿಲ್ಲ.

ನಮ್ಮ ದೇಶದಲ್ಲಿ ಪಾರ್ಲಿಮೆಂಟ್ ವ್ಯವಸ್ಥೆಯನ್ನು ನಮ್ಮ ವಚನಕಾರರು ಹನ್ನೆರಡನೇ ಶತಮಾನದಲ್ಲಿಯೇ ಸಮಾಜದ ಕಟ್ಟುಪಾಡುಗಳನ್ನು ಬದಲಾಯಿಸಲು ನಿರ್ಮಿಸಿದ್ದು ಕನ್ನಡಿಗರಾದ ನಮಗೆ ಒಂದು ಹೆಮ್ಮೆ ಎಂದು ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಇನ್ನೋರ್ವ ಖ್ಯಾತ ಚಿಂತಕರು ಹಾಗೂ ಬೆಂಗಳೂರು ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕರಾದ ಶ್ರೀಮತಿ ಡಾ ಎಂ ಎಸ್ ಆಶಾದೇವಿಯವರು ಮಾತನಾಡಿ ಹೆಣ್ಣಿಗೆ ಸ್ವಾತಂತ್ರ್ಯ ಸಿಗಲು ದಾರಿ ಮಾಡಿಕೊಡುವ ದಿನವನ್ನೆ ಈ ಪುರುಷ ಪ್ರಧಾನವಾದ ರಾಜಕೀಯ ವ್ಯವಸ್ಥೆ ಅದನ್ನು ತಮ್ಮ ಸ್ವಾರ್ಥಪರವಾಗಿ ಬಳಸುತ್ತಿರುವದು ವಿಪರ್ಯಾಸವಾಗಿದೆ ಎಂದು ತಮ್ಮ ನಿರಾಶೆ ವ್ಯಕ್ತಪಡಿಸಿದರು.

ಅವರು ಮಾತನಾಡಿ ಮಹಿಳಾ ದಿನಾಚರಣೆ ದಿನವನ್ನು ಶ್ರೇಣಿಕರಣವನ್ನು ಮಾಡುವ ಮೂಲಕ ಮಹಿಳೆಯರಿಗಾಗಿ ಸಿಕ್ಕ ಒಂದು ಅವಕಾಶವನ್ನು ಬಳಸಿಕೊಳ್ಳುಲಾಗುತ್ತಿಲ್ಲ ಆದರೆ ನಾವು ಸದ್ಯದ ಪರಿಸ್ಥಿತಿಯಲ್ಲಿ ಮಹಿಳಾ ದಿನಾಚರಣೆಯನ್ನು ಗಂಡು ಮತ್ತು ಹೆಣ್ಣು ಸೇರಿ ಆಚರಿಸಬೇಕು ಎಂಬ ಕಲ್ಪನೆಯನ್ನೆ ಮರೆತು ಬಿಟ್ಟಿದ್ದವೆ. ಹೀಗಾಗಿ ಮಹಿಳಾ ದಿನಾಚರಣೆಗಿಂತ ಹೆಚ್ಚಾಗಿ ನಾವು ಇದನ್ನು ಅರಿವಿನ ದಿನಾಚರಣೆ ಎಂದು ಆಚರಿಸಿದರೆ ಇದಕ್ಕೆ ಇನ್ನು ಹೆಚ್ಚಾಗಿ ಮೌಲ್ಯ ಮತ್ತು ವ್ಯಾಪ್ತಿ ಬರುತ್ತದೆ.

ವಚನಸಾಹಿತ್ಯದ ಬಗ್ಗೆ ಎಷ್ಟೋ ಅಧ್ಯಯನ ಮತ್ತು ಸಂಶೋಧನೆಗಳು ನಡೆಯುತ್ತಿವೆ, ಹೀಗೆ ಪ್ರತಿಬಾರಿ ಒಂದೊಂದು ಅಧ್ಯಯನ ಬೆಳಕಿಗೆ ಬಂದಾಗ ಅಕ್ಷಯಪಾತ್ರೆಯ ಹಾಗೆ ಹೊಸ ಅಂಶಗಳು ಬೆಳಕಿಗೆ ಬರುತ್ತಲೇ ಇವೆ ಮತ್ತು ಎಲ್ಲ ಕಾಲದ ಓದಿಗೂ ಸಹ ವಚನ ಸಾಹಿತ್ಯ ತನ್ನ ಸಾಮಾಜಿಕ ಮತ್ತು ಸಾಹಿತ್ಯಿಕ ಅಂಶಗಳನ್ನು ನಿಡುತ್ತ ಬರುತ್ತಲೇ ಇದೆ. ಇಲ್ಲಿ ವಚನಕಾರರು ಹೆಣ್ಣಿಗೂ ಸಹ ಒಂದು ಪ್ರಾಮುಖ್ಯತೆಯನ್ನು ಕೊಟ್ಟರು ಎನ್ನುವುದಷ್ಟೇ ಅಲ್ಲ ಅದಕ್ಕಿಂತಲೂ ಮುಖ್ಯವಾಗಿ ಗಂಡು ಮತ್ತು ಹೆಣ್ಣು ಸೇರಿ ಹೇಗೆ ಈ ಚಳುವಳಿಯನ್ನು ಹುಟ್ಟು ಹಾಕಿದರು ಎನ್ನುವದಾಗಿದೆ. ಯಾವದೇ ಚಳುವಳಿಯ ಇತಿಹಾಸವನ್ನು ನೋಡಿದರೂ ಸಹ ಹೆಣ್ಣಿಗೆ ಅಲ್ಲಿ ಕೇವಲ ಪೋಷಕ ಪಾತ್ರ ನೀಡಲಾಗಿದೆ ಆದರೆ ಶರಣ ಚಳುವಳಿಯಲ್ಲಿ ಮಾತ್ರ ಹೆಣ್ಣಿಗೆ ಒಂದು ಪ್ರಧಾನ ಪಾತ್ರವನ್ನು ನೀಡಿದ್ದಾರೆ, ಆದರೆ ಇಲ್ಲಿ ಈ ಪ್ರಧಾನ ಪಾತ್ರವನ್ನು ಕೊಡಲಾಯಿತೋ ಅಥವಾ ಅವರೇ ಪಡೆದುಕೊಂಡರೋ ಎಂಬುದು ಒಂದು ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ, ಆದರೆ ಒಂದು ಅಂಶವೇನೆಂದರೆ ಹೆಣ್ಣಿಗೆ ಮಾತ್ರ ಶರಣರ ಕಾಲದಲ್ಲಿ ನಿಜವಾದ ಅವಕಾಶ ಸಿಕ್ಕಿದು ಮಾತ್ರ ನಿಜವಾಗಿದೆ. ಪುರುಷ ತನಗೆ ಬೇಕಾದ ಸಮಾಜವನ್ನು ತಾನು ನಿರ್ಮಿಸಿಕೊಂಡರೆ ಹೆಣ್ಣು ಮಾತ್ರ ತನಗೆ ಸಿಗಬೇಕಾದ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಹೋರಾಟ ನಡೆಸಿದಳು ಎಂಬ ಅಂಶವು ಇಲ್ಲಿ ಭಾಸವಾಗುತ್ತದೆ. ಗಂಡು ಮತ್ತು ಹೆಣ್ಣಿನ ಸಂಬಂಧ ಎನ್ನುವುದು ಬಹಳ ಪ್ರಾಕೃತಿಕವಾದ ಸಂಬಂಧವಾಗಿದ್ದು ಇದನ್ನು ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿಯಂತಹ ಶರಣ ಶ್ರೇಷ್ಠರು ಯಾವತ್ತಿಗೂ ಸಹ ಬಿಟ್ಟು ಕೊಡಲಿಲ್ಲ. ಅಲ್ಲಮನು ಸೇರಿ ಹಲವಾರು ವಚನಕಾರರು ಬಸವಾ ನಿನ್ನಿಂದಾ ಬದುಕಿದೆ ಎನ್ನುವ ಮಾತನ್ನು ಹೇಳುತ್ತಾರೆ ಹೀಗಾಗಿ ಹೆಣ್ಣಿನ ಸಾಮಾಜಿಕ ಸ್ಥಾನಮಾನದ ವಿಷಯದಲ್ಲಿ ಬಸವಣ್ಣನ ಪಾತ್ರ ಬಹಳ ದೊಡ್ಡದಾಗಿದೆ, ಆದರೆ ಅದೇ ಬಸವಣ್ಣ ಒಬ್ಬ ಹುಟ್ಟು ಸಮಾನತೆಯ ನಾಯಕನಾಗಿದ್ದಿಲ್ಲ ಅವನು ಕ್ರಮೇಣ ಬದಲಾಗುತ್ತ ಒಬ್ಬ ವಿಶ್ವಗುರು ಬಸವಣ್ಣನಾದ ಎಂದು ಹಲವಾರು ಉಪನ್ಯಾಸಗಳು ಹೇಳುತ್ತವೆ. ಹೀಗಾಗಿ ಶರಣರ ವಚನ ಪ್ರಭಾವದಿಂದ ಇವತ್ತು ನಮಗೆ ಹೆಣ್ಣು ಗಂಡಿನ ಬಗೆಗೆ ಒಂದು ಆಪ್ತ ಸಂವಾದ ನಡೆಸಲು ಸಹಾಯವಾಗಿದೆ ಎಂದು ತಮ್ಮ ಅಭಿಪ್ರಾಯ



ವ್ಯಕ್ತಪಡಿಸಿದರು.

ಕದಳಿ ವೇದಿಕೆಯ ಶ್ರೀಮತಿ ಮುಕ್ತಾ ಬಿ ಕಾಗಲಿ ತಮ್ಮ ಆಶಯ ನುಡಿಗಳನ್ನಾಡಿ ಶರಣ ಸಾಹಿತ್ಯದ ವತಿಯಿಂದ ಹಮ್ಮಿಕೊಳ್ಳಲಾಗಿರುವ ಈ ಕಾರ್ಯಕ್ರಮವು ಮಹಿಳಾ ಹಕ್ಕುಗಳ ಗೌರವಕ್ಕಾಗಿ ಒಂದು ನಾಂದಿ ಹಾಡಿದೆ, ಪರಿಷತ್ತನ್ನು ಯಶಸ್ವಿಯಾಗಿ ಮುಂದುವರೆಸಿಕೊಂಡು ಹೋಗಲು ದೆಹಲಿ ಘಟಕದ ಅಧ್ಯಕ್ಷರಾದ ಎನ್ ಪಿ ಚಂದ್ರಶೇಖರ್ ಅವರ ಪರಿಶ್ರಮ ಬಹಳಷ್ಟಿದ್ದು ಎಂದು ಹೇಳುತ್ತಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮುಖ್ಯ ಅತಿಥಿಗಳಿಗೆ, ಉಪನ್ಯಾಸಕರಿಗೆ ಮತ್ತು ಭಾಗವಹಿಸಿದ್ದ ಎಲ್ಲ ಮಹಿಳಾ ಗೌರವಾರ್ಥಿಗಳಿಗೆ ತಮ್ಮ ಅಭಿಲಾಷೆಯನ್ನು ಅರ್ಪಿಸಿದರು.

ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ್ದ ಕದಳಿ ವೇದಿಕೆ ದೆಹಲಿ ಘಟಕದ ಅಧ್ಯಕ್ಷರಾದ ಶ್ರೀಮತಿ ಜಯಶ್ರೀ ಬಸವರಾಜ್ ಅವರು ತಮ್ಮ ಅಧ್ಯಕ್ಷೀಯ ನುಡಿಗಳನ್ನಾಡಿ ಮಹಿಳೆಯರ ಪರವಾದ ಚಿಂತನೆ ಮತ್ತು ಸಂಶೋಧನೆ ದೇಶದಲ್ಲಿಯೇ ಮೊದಲು ನಡೆದದ್ದು ನಮ್ಮ ಕರ್ನಾಟಕದ ಹನ್ನೆರಡನೇ ಶತಮಾನದ ವಚನಕಾರರಿಂದ, ಇದು ಬೆಳಕಿಗೆ ಬಂದಿದ್ದು ಒಂದು ಮಹತ್ತರವಾದ ಬೆಳವಣಿಗೆಯಾಗಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದರು.

ಎರಡು ಗಂಟೆಗಳ ಕಾಲ ಕಾರ್ಯಕ್ರಮವು ಬಹಳ ಸುಮಧುರವಾಗಿ ಮೂಡಿಬಂದಿತು. ಮಹಿಳಾ ದಿನದ ನಿಮಿತ್ತವಾಗಿ ಸಂಪೂರ್ಣ ಮಹಿಳೆಯರೇ ನೆರವೇರಿಸಿಕೊಟ್ಟ ಕಾರ್ಯಕ್ರಮದಲ್ಲಿ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷ ಎನ್ ಪಿ ಚಂದ್ರಶೇಖರ್ ಅವರು ಉಪಸ್ಥಿತರಿದ್ದರು. ಸ್ಥಳೀಯ ಮಕ್ಕಳು ಹಾಗೂ ಮಹಿಳೆಯರು ವಚನ ಗಾಯನ ಮತ್ತು ವಚನ ನೃತ್ಯಗಳಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರಗು ತಂದುಕೊಟ್ಟರು.

ಶ್ರೀಮತಿ ಸುಜಾತಾ ಗೌರವ್ ವಚನ ಗಾಯನ ಮಾಡಿದರು. ಶ್ರೀಮತಿ ದೀನಾ ಜೋಯ್ಸ್ ಅವರು ನಿರೂಪಿಸಿದರು ಮತ್ತು ಶ್ರೀಮತಿ ಸುಜಾತ ನಿಂಬಾಳಕರ್ ಅವರು ಸ್ವಾಗತಿಸಿದರು. ಶ್ರೀಮತಿ ಮೈಥಿಲಿ ಅತ್ತಾವರ್ ಅವರು ವಂದಿಸಿದರು.

**ರಾಜಕುಮಾರ್ ನೀಲೂರ್**





# ಕೆಂಪು ಜುಟ್ಟಿನ ಹುಂಜ ಮತ್ತು ಅನಾಥ ಅಣ್ಣ ತಂಗಿ

ಅವರಿಬ್ಬರಿದ್ದರು; ಪುಟಾಣಿ ಅಣ್ಣ, ಪುಟ್ಟ ತಂಗಿ. ಇಬ್ಬರಂದರೆ, ಇಬ್ಬರೇ. ಪೂರಾ ಅನಾಥರು. ಹಾ! ಅವರ ಹತ್ತಿರ ಕೆಂಪು ಜುಟ್ಟಿನ ಹುಂಜವೊಂದಿತ್ತು. ಅದೆಂದರೆ ಇಬ್ಬರಿಗೂ ಬಹಳ ಪ್ರೀತಿ. ಒಂದು ದಿನ ತಂಗಿಗೆ ವಿಪರೀತ ಹಸಿವಾಯ್ತು. ಮನೇಲಿ ತಿನ್ನಲಿಕ್ಕೆ ಏನೂ ಇಲ್ಲ! ಸರಿ. ಅಣ್ಣ ಮನೆಯ ಮೂಲೆಮೂಲೆ ಹುಡುಕಿದ.

ಕಣಜದ ಬುಡದಲ್ಲೊಂದಷ್ಟು ಗೋಧಿಕಾಳು ಸಿಕ್ಕವು. ಅದನ್ನೇ ಬೀಸಿ ತಂಗಿಗೆ ಚಪಾತಿ ಮಾಡಿಕೊಡುವಾ ಅಂತ ಅಣ್ಣ ಅವನ್ನು ಒಟ್ಟುಮಾಡಿದ. ಇನ್ನೇನು ಬೀಸಬೇಕು, ಹುಂಜ ಅವನನ್ನ ತಡೆಯಿತು. ಒಂದು ಕಾಳು ಗೋಧಿಯನ್ನ ಬಿತ್ತಲು ಹೇಳಿತು. ಹುಡುಗ ಹಾಗೇ ಮಾಡಿದ.

ಮಾರನೆ ದಿನ ಬಾಗಿಲು ತೆರೆದಾಗ ನೋಡುವುದೇನು? ಅಂವ ಬಿತ್ತಿದ ಗೋಧಿಕಾಳು ಮುಗಿಲು ಮೀರಿ ಬೆಳೆದಿತ್ತು. ಅಂಗಳ ತುಂಬ ಹರಡಿತ್ತು ಅದರ ದಪ್ಪ ಕಾಂಡ. ಹುಡುಗನಿಗೆ ಕುತೂಹಲ ತಡೆಯದೆ ಸರಸರನೆ ಕಾಂಡವೇರುತ್ತ ಹೋದ. ಹೋಗುತ್ತ ಹೋಗುತ್ತ ಮೋಡಗಳನ್ನೂ ದಾಟಿ ಆಕಾಶದ ನೀಲಿಯನ್ನೂ ದಾಟಿ... ಗೋಧಿ ಗಿಡದ ತುದಿ ಮುಗಿಯುವಲ್ಲಿ ಒಂದು ಮನೆಯ ಎದುರು ಬಂದು ನಿಂತ. ಆ ಮನೆಯೊಳಗಿಂದ ಘಮಘಮ ವಾಸನೆ. . . ಹುಡುಗ ಹೋಗಿ ನೋಡುತ್ತಾನೆ. . .

ಒಂದು ಮಾಟಾಗಾತಿ ಮುದುಕಿ ಬೀಸೇಕಲ್ಲು ಬೀಸುತ್ತ ಕುಳಿತಿದೆ. ಅದರಿಂದ ಬಹಳ ದೋಸೆಗಳು, ಕಡಬುಗಳು, ಹೋಳಿಗೆ, ಚಕ್ಕುಲಿ, ಕೋಡುಬಳೆ. . . ಆಹ್! ಸೊರಸೊರನೆ ಬಾಯಲ್ಲಿ ನೀರೂರಿತು ಹುಡುಗನಿಗೆ!!

ಹಾಗೇ ನೋಡುತ್ತ ನಿಂತವನಿಗೆ ಮುದುಕಿಯ ಎಡಗಣ್ಣು ಕುರುಡು ಅಂತ ಗೊತ್ತಾಯಿತು. ಅದಕ್ಕೇ, ಕಳ್ಳಬೆಕ್ಕಿನ ಹಾಗೆ ಹೆಜ್ಜೆಯಿಡುತ್ತ ಎಡಬದಿಯಿಂದಲೇ ಮೆಲ್ಲನೆ ನುಸುಳಿ ಅಂಗಿಯನ್ನ ಕೊಟ್ಟೆಯ ಹಾಗೆ ಮಾಡಿಕೊಂಡು ಕೈಲಾದಷ್ಟು ತಿಂಡಿಯನ್ನು ಬಾಚಿಬಾಚಿ ತುಂಬಿಕೊಂಡ. ಮತ್ತೆ ಸರಸರನೆ ಕಾಂಡ ಇಳಿದು ಮನೆ ಸೇರಿದ.

ಅಣ್ಣ ತಂಗಿ ಹೊಟ್ಟೆ ತುಂಬ ತಿಂಡಿಗಳನ್ನು ತಿಂ-ದರು. ಕೆಂಪುಜುಟ್ಟಿನ ಹುಂಜವೂ ಕೊಕ್ಕೊಕ್ಕೋ ಅನ್ನುತ್ತ ಕುಕ್ಕಿ ಕುಕ್ಕಿ ತಿಂದಿತು. ಮತ್ತೆ ಮಾರನೇ ದಿನವೂ ಹುಡುಗ ಕಾಂಡವೇರಿ ಮಾಟಾಗಾತಿಯ ಮನೆಯಿಂದ ತಿಂಡಿ ಹೊತ್ತು ತಂದ. ಹೀಗೇ ನಾಲ್ಕೈದು ದಿನ ಸಾಗಿತು. ಅದೊಂದು ದಿನ ಒಕ್ಕಣ್ಣಿನ ಮಾಟಗಾತಿ ತನ್ನ ಕುರುಡನ್ನ ಎಡದಿಂದ ಬಲಗಣ್ಣಿಗೆ ಬದಲಿಸಿಕೊಂಡು ಕುಂತಿತ್ತು. ದಿನದಿನವೂ ತಾನು ಬೀಸಿ ಪಡೆದ ತಿಂಡಿಯಲ್ಲಿ ಕಡಿಮೆಯಾಗ್ತಿದೆಯಲ್ಲ ಅಂತ ಅದಕ್ಕೆ ಅನುಮಾನ. ಎಂದಿನಂತೆ ತಿಂಡಿ ಕದಿಯಲು ಹೋದ ಹುಡುಗ ಸಿಕ್ಕಿಬಿದ್ದ!

ಕಟಕಟ ಹಲ್ಲುಕಡಿಯುತ್ತ ಮಾಟಗಾತಿ 'ಹುಡುಗಾ! ನೀನೇಯೋ ಇಷ್ಟು ದಿನದಿಂದ ನನ್ನ ತಿಂಡಿಯನ್ನ ಕದೀತಿದ್ದಿದ್ದು' ತಡಿ! ನಿಂಗೆ ತಕ್ಕ ಶಾಸ್ತಿ ಮಾಡ್ತೀನಿ!! ಅಂತ ಕೂಗಾಡಿತು. ಹಂಡೆಯ ನೀರು ಕಾಯಿಸಲಿಕ್ಕೆ ಹುಡುಗನ್ನೇ ಕಟ್ಟಿಗೆ ಹಾಗೆ ಉರಿಸ್ತೀನಿ ಅಂದುಕೊಂಡಿತು. ಮುದುಕಿ. ಸೀದಾ ನೀರೊಲೆ ಹತ್ತಿರ ಕರಕೊಂಡು ಹೋಗಿ ಒಲೆಯೊಳಗೆ ತೂರಲು ಹೇಳಿತು. ಇಷ್ಟೆಲ್ಲ ಅದರೂ ನಮ್ಮ ಹುಡುಗ ಸ್ವಲ್ಪವೂ ಹೆದರಲಿಲ್ಲ. ಒಲೆ ಹತ್ತಿರ ಹೋಗಿ ತಾನು ಅದರಲ್ಲಿ ಹಿಡಿಸೋಲ್ಲ ಅಂತ ನಾಟಕವಾಡಿದ. ಮುದುಕಿ ರೇಗಿ, ಮೈ ಮಡಚಿ ತೂರಿಕೋ ಹುಡುಗಾ ಅಂತು. ಊಹೂಂ. ನಮ್ಮ ಹುಡುಗನ ನಾಟಕವೋ ನಾಟಕ! ಕೊನೆಗೆ, "ನೀನೇ ತೋರಿಸು ಮುದುಕೀ, ಹೇಗೆ ತೂರಬೇಕು ಅಂತ" ಅಂದ.

ಸರಿ. ಮುದುಕಿ ಒಲೆಯೊಳಗೆ ತೂರಿಕೊಂಡಳು. ಹುಡುಗ ಅದೇ ಸಮಯ ಅನ್ನುತ್ತ, ಸೀಮೆ ಎಣ್ಣೆ ಸುರಿದು ಬೆಂಕಿ ಕಡ್ಡಿ ಗೀರಿ ಮಾಟಗಾತಿಯನ್ನ ಸುಟುಬಿಟ್ಟ. ಆಮೇಲೆ ಸೀದಾ 'ಮಾಯದ ಬೀಸೇಕಲ್ಲನ್ನ' ಹಿಡಿದು ಗೋಧಿ ಗಿಡ ಇಳಿದು ಮನೆ ಸೇರಿದ. ಆಮೇಲೆ ಅಣ್ಣ ತಂಗಿ ಸೇರಿ ಗಿಡದ ಕಾಂಡ ಕತ್ತರಿಸಿ ಹಾಕಿದರು!

ಆಮೇಲೆ, ದಿನದಿನವೂ ಅಣ್ಣ ತಂಗಿ ಥರಥರಾವರಿ ತಿಂಡಿ ತಿನ್ನುತ್ತ ಸುಖವಾಗಿದ್ದರು ಅಂತ ಕಥೆ ಮುಗಿಸಿಬಿಡಬಹುದಿತ್ತು! ಆದರೆ ಹಾಗಾಗಲಿಲ್ಲ!! ಆ ಊರಲ್ಲೊಬ್ಬ ದುಷ್ಟ ರಾಜ. ಅವನಿಗೆ ಅಣ್ಣ ತಂಗಿಯರ ಹತ್ತಿರ ಮಾಯದ ಬೀಸೇಕಲ್ಲಿರುವ ಸಂಗತಿ ತಿಳಿಯಿತು. ಆ ಮಕ್ಕಳಿಂದ ಅವನು ಅದನ್ನ ಕಿತ್ತುಕೊಳ್ಳಲು ಉಪಾಯ ಮಾಡಿದ. ಬೀಸೇಕಲ್ಲನ್ನು ನೋಡಿಕೊಡುವುದಾಗಿ ಅದನ್ನ ತೆಗೆದುಕೊಂಡು ಬೇರೆಯದೇ ಒಂದನ್ನ ಕಳಿಸಿಕೊಟ್ಟ. ಎಂದಿನಂತೆ ಮಕ್ಕಳು ತಿಂಡಿಗಾಗಿ ಕಲ್ಲು ಬೀಸುತ್ತಾರೆ, ಅಲ್ಲೇನಿದೆ!. . . ಧೂರ್ತ ರಾಜ ನ್ಯಾಯ ಕೇಳಲು ಬಂದ ಅಣ್ಣ ತಂಗಿಯನ್ನ ಗಡೀಪಾರು ಮಾಡಿಬಿಟ್ಟ. ಸರಿ. . . ನಮ್ಮ ಕೆಂಪುಜುಟ್ಟಿನ ಹುಂಜ ಈಗ ಬೀದಿಗೆ ಬಂತು. ಬಂದು ಬೇಲಿಗಳ ಮೇಲೆ ನಿಂತು ಜೋರಾಗಿ ಕೂಗತೊಡಗಿತು.

'ಕೊಕ್ಕೊಕ್ಕೋ ಕೊಕ್ಕೊಕ್ಕೋ' ಈ ದುಷ್ಟ ರಾಜ ಪಾಪದ ಬಡ ಮಕ್ಕಳಿಗೆ ಮೋಸ ಮಾಡಿ ಅವರ ಬೀಸೇಕಲ್ಲು ಕಿತ್ತುಕೊಂಡಿದ್ದಾನೆ. . . ಅಲ್ಲಿ ಆ ಬಡ ಮಕ್ಕಳು ಉಪವಸವಿದ್ದರೆ, ಇವನಿಲ್ಲಿ ಬಗೆಬಗೆಯ ಭಕ್ಷ್ಯ ತಿನ್ನುತ್ತಿದ್ದಾನೆ! ನಾಚಿಕೆಗೇಡು, ನಾಚಿ-ಕೆಗೇಡು!! ಕೆಂಪು ಜುಟ್ಟಿನ ಹುಂಜದ ಕೂಗು ಕೇಳಿ ಜನರು ಆಶ್ಚರ್ಯಪಟ್ಟರು. ಗುಸುಗುಸು ಮಾಡುತ್ತ ಹುಂಜದ ಬಳಿ ಹೋಗಿ ಏನು ಎತ್ತ ತಿಳಿದುಕೊಂಡರು. ಹೀಗೆ ಕೆಂಪುಜುಟ್ಟಿನ ಹುಂಜ ಗಲ್ಲಿ ಗಲ್ಲಿಯಲ್ಲಿ ಕೊಕ್ಕೊಕ್ಕೋ ಅನ್ನುತ್ತ ರಾಜನ ವಿರುದ್ಧ ಕೂಗುತ್ತ ಕೊನೆಗೆ ರಾಜಬೀದಿಗೂ ಬಂತು. ಅಲ್ಲಿ ರಾಣಿಯ ಅಂತಃಪುರದ ಕಿಟಕಿ ಮೇಲೆ ನಿಂತು, 'ಕೊಕ್ಕೊಕ್ಕೋ' ಮಕ್ಕಳ ಕೈಯಿಂದ ಬೀಸೇಕಲ್ಲು ಕಿತ್ತುಕೊಂಡ ರಾಜನ ಹೆಂಡತಿಯೇ... ಅನ್ನುತ್ತ ರಾಣಿಯನ್ನು ಛೇಡಿಸಿತು.

ರಾಣಿಗೆ ನಾಚಿಕೆಯಾಗಿ ರಾಜನೊಟ್ಟಿಗೆ ಜಗಳವಾಡಿದಳು. ಆ ಹೊತ್ತಿಗೆ ಜನಗಳೂ ರಾಜನ ಬಗ್ಗೆ ಮಂತ್ರಿಯ ಬಳಿ ವಿಚಾರಿಸತೊಡಗಿದ್ದರು. ಅತ್ತ ಕೆಂಪುಜುಟ್ಟಿನ ಹುಂಜ ಮಾತ್ರ ತನ್ನ ಪಾಡಿಗೆ ಕೂಗು ಮುಂದುವರಿಸಿತ್ತು. ರೇಜಿಗೆ ಬಿದ್ದ ರಾಜ ಹುಂಜವನ್ನ ಹಿಡಿಸಿ ಸೆರೆಮನೆಗೆ ಹಾಕಿಸಿದ. ಅದು ಅಲ್ಲೂ ತನ್ನ ಕೆಲಸ ಮುಂದುವರೆಸಿತು. ಈಗಂತೂ ರಾಜನ ತಲೆ ಕೆಟ್ಟುಹೋಯ್ತು.

ಅದನ್ನ ಕೊಯ್ದು ಸಾರು ಮಾಡಿ ಬಡಿಸುವಂತೆ ಆಜ್ಞೆ ಮಾಡಿದ. ಅಡುಗೆಯವರು ಕೂಗುತ್ತಿದ್ದ ಹುಂಜವನ್ನ ಕೊಯ್ದು ಮಸಾಲೆ ಅರೆದು ಸಾರು ಮಾಡಿದರು. ಈಗ ರಾಜನಿಗೆ ಸಂತೃಪ್ತಿ. ಖುಶಿಖುಶಿಯಾಗಿ ತಾನೊಬ್ಬನೇ ಅಷ್ಟೂ ಸಾರು ಸುರಿದುಕೊಂಡು ತಿಂದುಬಿಟ್ಟ! ಊಟ ಮಾಡಿ ಮಲಗುವ ಕೋಣೆಗೆ ಹೋದ ರಾಜನ ಹೊಟ್ಟೆಯಿಂದ ಮತ್ತೆ ಹುಂಜದ ಕೂಗು! 'ಕೊ-ಕ್ಕೊಕ್ಕೋ' ದುಷ್ಟ ರಾಜ ಮಕ್ಕಳಿಂದ ಬೀಸೇಕಲ್ಲು ಕಿತ್ತುಕೊಂಡ.

ಕೆಂಪು ಜುಟ್ಟಿನ ಹುಂಜ- ನನ್ನನ್ನು ಸೆರೆಮನೆಗೆ ತಳ್ಳಿದ. ಈಗ ಈ ದುಷ್ಟ ನನ್ನನ್ನು ಬೇಯಿಸಿ ತಿಂದಿದ್ದಾನೆ! ಅಲ್ಲಿ ಬಡ ಮಕ್ಕಳು ಉಪವಾಸ ಬಿದ್ದಿದ್ದರೆ, ಇಲ್ಲಿ ರಾಜ ತಿಂದು ತೇಗುತ್ತಿದ್ದಾನೆ! ಈಗಂತೂ ರಾಜನಿಗೆ ಬೊಗಸೆ ನೀರಲ್ಲಿ ಮುಳುಗಿ ಸಾಯುವಷ್ಟು ನಾಚಿಕೆಯಾಯ್ತು. ಅವನು ಹೋದಲ್ಲಿ ಬಂದಲ್ಲೆಲ್ಲ ಕೆಂಪುಜುಟ್ಟಿನ ಹುಂಜದ ಕೊಕ್ಕೊಕ್ಕೋ ನಡೆದೇ ಇತ್ತು! ಕೈಕೈ ಹಿಸುಕಿಕೊಂಡ ರಾಜ, ಅವಮಾನ ತಾಳಲಾರದೆ ತಿಂದಿದ್ದೆಲ್ಲ ಕಕ್ಕಿ-ಕೊಂಡ.

ಕೆಂಪುಜುಟ್ಟಿನ ಹುಂಜ ಇಡಿಇಡಿಯಾಗಿ ಹೊರಬಂದು ಅರಮನೆ ಬೇಲಿಯತ್ತ ಹಾರಿಹೋಯ್ತು. ಮತ್ತೆ ತನ್ನ ಕೂಗು ಮುಂದುವರೆಸಿತು. ಈಗಂತೂ ರಾಣಿ ರಾಜನನ್ನ ತರಾಟೆಗೆ ತೆಗೆದುಕೊಂಡಳು. ಬೀಸೇಕಲ್ಲು ಕೊಟ್ಟುಬಿಡು ಅಂತ ಬುದ್ಧಿ ಹೇಳಿದಳು. ಕೊನೆಗೂ ರಾಜ ಕೆಂಪುಜುಟ್ಟಿನ ಹುಂಜದ ಕಾಟಕ್ಕೆ ಬೇಸತ್ತು ಆ ಮಕ್ಕಳನ್ನು ಕರೆಸಿದ. ಅವರ ಬೀಸೇಕಲ್ಲು ಅವರಿಗೆ ಮರಳಿಸಿದ.

ಆಮೇಲಿಂದ ಅಣ್ಣ ತಂಗಿ ದಿನವೂ ಬೀಸೆಕಲ್ಲು ಬೀಸಿ ಬೀಸಿ ರುಚಿರುಚಿಯಾದ ತಿಂಡಿಗಳನ್ನು ಪಡೆಯುತ್ತ, ಬಡವರಿಗೆಲ್ಲ ಹಂಚುತ್ತ ನೂರು ವರ್ಷ ಸುಖವಾಗಿದ್ದರು. ಕೆಂಪುಜುಟ್ಟಿನ ಹುಂಜವೂ ರಾಜನ ಪ್ರಾರ್ಥನೆಗೆ ಒಪ್ಪಿ ಮುಂದೆ ಯಾವತ್ತೂ ಅವನ ವಿರುದ್ಧ ಕೂಗಲಿಲ್ಲ. ತಾನೂ ತಿಂಡಿಯಲ್ಲಿ ಪಾಲು ಪಡೆದು ಅಣ್ಣ ತಂಗಿಯರೊಟ್ಟಿಗೆ ಸುಖವಾಗಿ ಇದ್ದುಬಿಟ್ಟಿತು....

**ಚಂದ್ರಶೇಖರ ಜೋಳದರಾಶಿ**

# ‘ಕನ್ನಡ ರಂಗಭೂಮಿಯಲ್ಲಿ ಹಾಸ್ಯ’ ಕುರಿತ ಸಂವಾದ

ನವದೆಹಲಿಯ ದಿನಕರ ಫೌಂಡೇಶನ್‌ದಿಂದ 7.3.2021ರಂದು ನಿಸ್ತಂತು ಮಾಧ್ಯಮದ ಮೂಲಕ ‘ಕನ್ನಡ ರಂಗಭೂಮಿಯಲ್ಲಿ ಹಾಸ್ಯ’ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಬೆಂಗಳೂರಿನ ಅಬ್ಬಾಸ್ ಖಾನ್ ಮಹಿಳಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರೂ ಹಾಗೂ ಖ್ಯಾತ ರಂಗಕರ್ಮಿಗಳೂ ಆದ ಡಾ. ಎಂ.ಎಸ್. ವಿದ್ಯಾ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಮಾತನಾಡಿದರು.

ಡಾ. ಎಂ.ಎಸ್. ವಿದ್ಯಾ ಅವರು ಈ ಕ್ಷೇತ್ರ-ಕ್ಕೆ ಆಗಮಿಸಿದ ಸಂದರ್ಭ ಇವರಿಗೆ ತಾಯಿಯೇ ಪೂರಕವಾಗಿ ಪ್ರೇರಕರಾಗಿದ್ದರು ದೃಕ್-ಶ್ರವಣೋಪಕರಣಗಳ ಬಳಕೆ ವಿರಳವಾದ ದಿನಗಳವು. ಶಾಲಾ ರಜಾ ದಿನಗಳಲ್ಲಿ ಪಾಲಕರು ಮಕ್ಕಳನ್ನು ರಂಗ ತರಬೇತಿ ಶಿಬಿರಗಳಿಗೆ ಸೇರಿಸುವತ್ತ ಆಸ್ಥೆ ವಹಿಸುವುದು ವಾಡಿಕೆಯಾಗಿತ್ತು. ಇಂತಹ ಆಸಕ್ತಿ ವ್ಯಕ್ತಿತ್ವ ವಿಕಸನಕ್ಕೆ ಪರಿಣಾಮಕಾರಿಯೂ ಕೂಡ. ತಾಯಿಯ ಪ್ರೇರಣೆಯಿಂದ ರಂಗಾಸಕ್ತಿ ಬೆಳೆಸಿಕೊಂಡು, ಬಾಲ ಕಲಾವಿದೆಯಾಗಿ ರಂಗಭೂಮಿಗೆ ಅಡಿಯಿಟ್ಟೆ ಎಂದು ಡಾ. ವಿದ್ಯಾ ಅವರು ನೆನಪಿಸಿಕೊಂಡರು.

ವಿಜ್ಞಾನ ಐಚ್ಛಿಕವಾಗಿ ಅಧ್ಯಯನ ವಿಷಯವಾದರೂ, ನಾಟಕ ನೆಚ್ಚಿನ ಆಸಕ್ತಿ ಕ್ಷೇತ್ರವಾಯಿತು. ಮೂರು ಚಿನ್ನದ ಪದಕದೊಂದಿಗೆ ನಾಟಕ ವಿಷಯದಲ್ಲಿ ಸ್ನಾತಕ ಪದವಿ ಪಡೆದರು, ‘ಕನ್ನಡ ರಂಗಭೂಮಿಯಲ್ಲಿ ಹಾಸ್ಯ’ ಎಂಬ ವಿಷಯ ಕುರಿತು ಮಂಡಿಸಿದ ಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಡಾಕ್ಟರೇಟ್ ಗೌರವ ದೊರೆಯಿತು. ಈ ಕ್ಷೇತ್ರದಲ್ಲಿ ಇನ್ನೂ ಸಂಶೋಧನಾ ಕಾರ್ಯ ನಡೆಯಬೇಕಾಗಿದೆ ಎಂದವರು ಅಭಿಪ್ರಾಯ ವ್ಯಕ್ತಪಡಿಸಿದರು.

ಜಾನಪದ ರಂಗಭೂಮಿ, ಹವ್ಯಾಸಿ ರಂಗಭೂಮಿ ಹಾಗೂ ವೃತ್ತಿ ರಂಗಭೂಮಿಯಲ್ಲಿ ‘ಹಾಸ್ಯ’ದ ಕುರಿತು ಮಾತನಾಡಿದರು. ನವರಸಗಳಲ್ಲಿ ಹಾಸ್ಯರಸವೂ ಒಂದು, ನಾಟಕಗಳಲ್ಲಿ ಹಾಸ್ಯಕ್ಕೆ ಅದರದ್ದೇ ಆದ ಗೌರವವಿದೆ. ಅಭಿನಯಕಾರರಿಗೆ ಯಾವುದೇ ಪಾತ್ರಗಳು ಇಷ್ಟದ ಪಾತ್ರಗಳೇ ಆಗಿರುತ್ತವೆ. ಪ್ರತಿ ಪಾತ್ರವೂ ಸಹ ಸವಾಲಿನದೇ ಎಂದು ತಿಳಿದುಕೊಂಡಾಗ ಸಲೀಸಾಗಿ ತೆ-ೂೕರುತ್ತದೆ. ನಾಟಕದ ಪ್ರತಿ ಪ್ರಯೋಗಗಳಲ್ಲಿಯೂ ಹೊಸತನ್ನು ಕಲಿಯುವ ಸದವಕಾಶ ಇರುತ್ತದೆ. ಹಾಸ್ಯ ನಟನೆ ಸ್ವಲ್ಪ ಕಷ್ಟಕರವಾಗಿದ್ದು ಸಂಭಾಷಣೆ, ಹಾವ-ಭಾವ, ಸಮಯಕ್ಕೆ ತಕ್ಕುದಾಗಿ ಇದ್ದಲ್ಲಿ ಪರಿಣಾಮಕಾರಿಯಾದ ಹಾಸ್ಯ ಹೊರಹೊಮ್ಮಿ, ಆ ತಕ್ಷಣಕ್ಕೆ ಪ್ರೇಕ್ಷಕನಿಂದ ಪ್ರತಿಕ್ರಿಯೆ ಬಂದು, ಮತ್ತಷ್ಟು ಹುರುಪಿನಿಂದ ಅಭಿನಯಿಸಲು ಅನುವಾಗುತ್ತದೆ ಎಂದು ಇಷ್ಟದ ಪಾತ್ರದ ಕುರಿತು ಕೇಳಿದ ಪ್ರಶ್ನೆಗೆ ಹೀಗೆ ಅಭಿಪ್ರಾಯಿಸಿದರು.

ರಂಗಭೂಮಿಗೆ ಮೂಲ ಭೂಮಿಕೆ ಒದಗಿಸಿದ್ದು ಜನಪದ ರಂಗಭೂಮಿ. ಇದು ಪ್ರದರ್ಶನ ಕಲೆಯಾದರೂ, ಜಾನಪದರಲ್ಲಿ ಕಲಾತ್ಮಕ ಆಯಾಮ ಪಡೆದುಕೊಂಡು ಕಾಲಕ್ರಮೇಣ ಅದರ ಸಂಬಂಧ ಉಳಿಸಿಕೊಂಡು ಬಂದಿತು. ಯಕ್ಷಗಾನ, ಬಯಲಾಟ, ಶ್ರೀ ಕೃಷ್ಣ ಪಾರಿಜಾತ, ರಾಧಾನಾಟ ಮುಂತಾದ ಕಲಾ ಪ್ರಕಾರಗಳು ಆರಾಧನಾ ರಂಗಭೂಮಿಯ ಮುಂದುವರೆದ ಕಲೆಗಳು. ರಂಗಕಲೆಗಳು ಪ್ರಬುದ್ಧವಾದಾಗ, ನಾಟಕದ ಚೌಕಟ್ಟಿನಲ್ಲಿಯೇ ಜಾನಪದ ರಂಗ ಪ್ರಕಾರಗಳು ಬಂದವು. ಮನಸ್ಸನ್ನು ಆಹ್ಲಾದಗೊಳಿಸುವ ಹಾಡು, ಕುಣಿತ, ನಿರಂತರ ಹಾಸ್ಯದಿಂದ ಪಾತ್ರ ಪೋಷಣೆ, ಪ್ರೇಕ್ಷಕರ ಅನುರಾಗ ಗಳಿಸಿವೆ. ಇಂದಿಗೂ ಶ್ರೀ ಕೃಷ್ಣ ಪಾರಿಜಾತ, ದೊಡ್ಡಾಟ, ಸಣ್ಣಾಟಗಳು ಸಾಮಾಜಿಕ ಕಥಾವಸ್ತು ಒಳಗೊಂಡು, ಸಂಭಾಷಣೆ ಮೇಲುಗೈ ಪಡೆದಿವೆ. ಕೃಷ್ಣ ಪಾರಿಜಾತವು ಕಥೆ, ಸಂಗೀತ, ಸಂಭಾಷಣೆ ‘ಧೂತೆ’ಯ ಮೂಲಕ ನವೀರಾದ ಹಾಸ್ಯ ಕಟ್ಟಿಕೊಟ್ಟು ಸಾಂದರ್ಭಿಕ ಸಂಭಾಷಣೆಯೊಂದಿಗೆ ಹಾಸ್ಯ ಕಳೆ ಕಟ್ಟುವಂತದ್ದಾಗಿದೆ ಎಂದು ವಿವರಿಸಿದರು. ಜನಪದ ರಂಗವು ವೃತ್ತಿ ರಂಗದ ಆರಂಭದಿಂದಲೂ ಹಾಸ್ಯಕ್ಕೆ ಮಹತ್ವ ನೀಡಿದ್ದು ಧೂತ, ಚಾರಕ, ಕೋಡಂಗಿ, ವಿದೂಷಕ, ಹನುಮನಾಯಕ, ಸಾರಥಿ ಇತ್ಯಾದಿ ಪಾತ್ರಗಳ ಮೂಲಕ ಜನಮನ ಸೂರೆಗೊಂಡವು. ಜನರ ಆಡುನುಡಿಗೆ ಸಂದರ್ಭಕ್ಕನುಸಾರ ಸಂಭಾಷಣೆ ಇರುತ್ತಿದ್ದರಿಂದ ಇದು ಜನಸಾಮಾನ್ಯರ ರಂಗಭೂಮಿಯಾಯಿತೆನ್ನಬಹುದು ಎಂದು ಹೇಳಿದರು.

ಪ್ರತಿಯೊಂದು ಜಾನಪದ ರಂಗದಲ್ಲಿ ಹಾಸ್ಯ ಪಾತ್ರ ಇರುತ್ತಿತ್ತು, ಸಂಸ್ಕೃತ ನಾಟಕದಲ್ಲಿ ವಿದೂಷಕನ ಪಾತ್ರ ಸಾಕಷ್ಟು ಪ್ರಭಾವ ಬೀರಿದರೂ, ರಾಜನೊಂದಿಗೆ ಇರುವ ಕಲ್ಪನೆ ಚಿತ್ರಣ ಕಾಳಿದಾಸನ ನಾಟಕದಲ್ಲಿತ್ತು. ದಾಸರಾಟಗಳಲ್ಲಿ ಜವಾರಿ, ಸಣ್ಣಾಟದಲ್ಲಿ ಧೂತೆ, ರಾಧಾನಾಟದಲ್ಲಿ ಮೊದಲ ಬಾರಿಗೆ ವಿದೂಷಕಿ ಪ್ರವೇಶ ಆಗುತ್ತದೆ. ಶ್ರೀಕೃಷ್ಣ ಪಾರಿಜಾತ ಬಹಳ ಪ್ರಸಿದ್ಧ, ಶ್ರೀರಾಮ ಇಟ್ಟಣ್ಣವರು ಸಂಶೋಧನೆ ಮಾಡಿದ್ದಾರೆ. ಧೂತೆ ಆ ಕ್ಷಣದಲ್ಲಿಯೇ ಸನ್ನಿವೇಶಕ್ಕೆ ಅನುಗುಣವಾಗಿ ಸಂಭಾಷಣೆ ಮಾಡುವ ಪರಿ. ಸಾಂಸ್ಕೃತಿಕ ನೆಲೆಗಟ್ಟಿನ ಪರಿಚಯವಿದ್ದಾಗ ಸುಲಭವಾಗಿ ಹಾಗೂ ಆತ್ಮವಿಶ್ವಾಸದಿಂದ ಅಭಿನಯಿಸಬಹುದು ಎಂದು ಹೇಳಿದರು.

ಧೂತೆ, ವಿದೂಷಕ ಪಾತ್ರ ಪ್ರೇಕ್ಷಕರನ್ನು ಹಿಡಿದಿಡುವ ಹಾಗು ಸಮಯ ಸ್ಫೂರ್ತಿ ಇರಬೇಕು. ಬಿ.ಎ ಎಂಬ ಇಂಗ್ಲೀಷ ಪದ ಬಳಕೆ ಹಾಸ್ಯ ಲೇಪನಕ್ಕೆ ಬಳಸಿಕೊಳ್ಳುವ ಶೈಲಿ ಗಮನಿಸುವ ಅಂಶವಾಗಿದೆ ಎಂದರು. ಆ ಕ್ಷಣವೇ ಸೃಷ್ಟಿ ಮಾಡಿ ಹೇಳುವ ಕಲೆ ಕರಗತ ಮಾಡಿಕೊಂಡಿರುತ್ತಾರೆ. ಜನಪದ ರಂಗಭೂಮಿಗಳು ವೃತ್ತಿ ರಂಗಭೂಮಿಗೆ ಅಡಿಪಾಯ ಹಾಕಿದವು ಎಂದು ಹೇಳಿದರು.

ಮಾಸ್ಟರ್ ಹಿರಣ್ಣಯ್ಯ ಅವರಂತೆ ಕೆಲವು ನಟ-ರು ಹಾಗೂ ನಾಟಕಕಾರರು ಹಾಸ್ಯದ ಮೂಲಕ ಸಮಾಜಕ್ಕೆ ಸಂದೇಶ, ಪ್ರಸ್ತುತ ರಾಜಕೀಯದ ಕುಂದುಕೊರತೆಗಳನ್ನು ಜನರಿಗೆ ತಲುಪಿಸುವ ಸಾಮಾಜಿಕ ಜವಾಬ್ದಾರಿಯನ್ನು ತೋರಿದರು. ವಿಲಾಸಿ ಹಾಗೂ ಹವ್ಯಾಸಿ ರಂಗಭೂಮಿಯಲ್ಲಂತೂ ಹಾಸ್ಯಕ್ಕೆ ಒತ್ತುಕೊಟ್ಟಿದ್ದಾರೆ. ಮಹಿಳೆಯರು ರಂಗಭೂಮಿಯಲ್ಲಿ ನಟನೆ, ನಾಟಕ ರಚನೆ ಹಾಗೂ ಪ್ರಯೋಗಗಳಲ್ಲಿ ಸೈ ಎನಿಸಿಕೊಂಡಿದ್ದಾರೆ ಎಂದು ಹೇಳಿದರು.  ರಂಗಭೂಮಿಯಲ್ಲಿ ಮಹಿಳೆಯರ ತೊಡಗುವಿಕೆ ಬಹಳ ತಡವಾಗಿ ಆಯಿತು. ನಾಟಕ ರಚನೆ ಮುಂತಾದ ಕ್ಷೇತ್ರಗಳಲ್ಲಿ ಮಹಿಳೆ ತೊಡಗುವಿಕೆ ಇತ್ತು ಎಂದರು. ವೃತ್ತಿ ರಂಗಭೂಮಿಯಲ್ಲಿ ನಾಗರತ್ನಮ್ಮ ಅವರ ಸ್ತ್ರೀ ನಾಟಕ ಮಂಡಳಿ ಇತ್ತು. ಚಿಂದೋಡಿ ಲೀಲಾ ಮತ್ತಿತರರು ವೃತ್ತಿರಂಗಭೂಮಿಯಲ್ಲಿದ್ದರು. ಟಿ. ಸುನಂದಮ್ಮ, ಎಚ್.ಆರ್. ಇಂದ್ರ, ಕಲ್ಯಾಣಮ್ಮ, ಹೀಗೆ ಅನೇಕರು ಸಾಮಾಜಿಕ ನಾಟಕಗಳನ್ನು ರಚಿಸಿಸಿದ್ದಾರೆ. ಅಂದಿನ ಸಾಮಾಜಿಕ ಸ್ಥಿತಿ-ಗತಿಗಳನ್ನು ಗಮನದಲ್ಲಿಟ್ಟುಕೊಂಡು ನಾಟಕ ರಚನೆ ಮಾಡಿದ್ದಾರೆ, ‘ಫೋನಿನ ಫನ್’, ಮೈಲಾರಿ ಸರಸ, ಲಕ್ಷ್ಮೀ ಚಂದ್ರಶೇಖರ್ ಅವರ ಕ್ರಿಯೇಟಿವ್ ಥೇಟರ್.

ರಂಗನಾಟಕಗಳನ್ನು ಬರೆಯುವುದೇ ತುಸು ಕಷ್ಟವೇ ಸರಿ. ಪ್ರೇಕ್ಷಕರನ್ನು ಹಿಡಿದಿಡುವುದು ಅಷ್ಟು ಸುಲಭ ಅಲ್ಲ. ಹಾಸ್ಯ ನಾಟಕಗಳು ಮುಂಬರುವ ದಿನಗಳಲ್ಲಿ ಹೆಚ್ಚೆಚ್ಚು ಬರಬೇಕು ಎಂಬ ಒತ್ತಾಯ ಮತ್ತು ಒತ್ತಾಸೆ ವ್ಯಕ್ತಪಡಿಸಿದರು. ವಿಜಯಮ್ಮ ಅವರ ಬೀದಿ ನಾಟಕಗಳು ಪ್ರಯೋಗಗೊಂಡು ಜನಮಾನಸದಲ್ಲಿ ಬೀರಿದ ಪ್ರಭಾವ ಅಪಾರ ಎಂದರು. ಬಿ.ಸುನಂದಮ್ಮ ಅವರ  ‘ವಿದೇಶಿ ವರ’ ಅಂದಿನ ಕಾಲಕ್ಕನುಗುಣವಾಗಿ ಗಟ್ಟಿ ನಾಟಕಗಳೆನಿಸಿದವು. ಪ್ರಯತ್ನಶೀಲರಾದಾಗ ಯಶಸ್ಸು ಕಟ್ಟಿಟ್ಟ ಬುತ್ತಿ.

ನಟನಾಕಾರರು ಅಧ್ಯಯನಶೀಲತೆ, ಚುರುಕುತನ, ಬುದ್ಧಿಮತ್ತೆ, ಸೂಕ್ಷ್ಮಮತಿ, ಸಂಭಾಷಣೆಯ ಮುಖ್ಯ ಅಂಶಗಳ ಕಡೆಗೆ ಗಮನಹರಿಸಬೇಕು. ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವ ಕಲೆ ಕರಗತ ಮಾಡಿಕೊಂಡಿರಬೇಕು. ಆಂಗಿಕ ಚಲನವಲನ ಮುಖ್ಯವಾಗಿ ಗಮನಿಸಬೇಕಾದ ಅಂಶವಾಗಿದೆ. ಪಾತ್ರಗಳಿಗೆ ಮುಖ್ಯವಾಗಿ ನ್ಯಾಯ ಒದಗಿಸಬೇಕು.

ಇತ್ತೀಚಿಗೆ ಬಹಳಷ್ಟು ಯುವಜನರು ರಂಗಭೂಮಿಯೆದೆಡೆಗೆ ಆಕರ್ಷಿತರಾಗುತ್ತಿದ್ದಾರೆ. ಬದ್ಧತೆಯೊಂದಿಗೆ ಪರಿಪೂರ್ಣತೆ ಪಡೆಯಲು ಸಾಕಷ್ಟು ಶ್ರಮವಹಿಸುತ್ತಿದ್ದಾರೆ. ಎಲಿವೇಟರಲ್ಲಿ ಸಾಗದೇ ಏಣಿ ಬಳಸಿ ಸಾಧನೆಯಡೆಗೆ ಸಾಗಿದಾಗ ಯಶಸ್ಸು ಸಿದ್ಧಿಸುವುದರಲ್ಲಿ ಯಾವ ಸಂಶಯವೂ ಇಲ್ಲ ಎಂದರು. ಪ್ರತಿ ನಾಟಕದ ಪ್ರಯೋಗವೂ ಜೀವನ ಕಲಿಕೆಯಾಗಿದೆ. ಶಿಕ್ಷಣಕ್ಕಿಂತ ಮೊದಲು ಶಿಸ್ತನ್ನೂ ರೂಢಿಸಿಕೊಳ್ಳಬೇಕು, ರಂಗಭೂಮಿಯ ಬದ್ಧತೆ ಇರಬೇಕು. ನೇಪಥ್ಯ ಕಾರ್ಯವೂ ಅಷ್ಟೇ

ಮುಖ್ಯ ಎಂದು ಕಿವಿಮಾತು ಹೇಳಿದರು. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದ ಸಂವಾದವು ಅರ್ಥಪೂರ್ಣವಾಗಿದೆ. ತಮ್ಮನ್ನು ಆಹ್ವಾನಿಸಿ ಅವಕಾಶ ನೀಡಿದ ‘ದಿನಕರ’ ಜ್ಞಾನದ ದೀವಿಗೆಯಾಗಲಿ ಎಂದು ಆಶಿಸಿದರು. ಜಾನಪದ ತಜ್ಞ ಡಾ. ಪುರುಷೋತ್ತಮ ಬಿಳಿಮಲೆ ಅವರು ಈ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ‘ದಿನಕರ’ ಹಮ್ಮಿಕೊಂಡ ಎಲ್ಲಾ ಕಾರ್ಯಕ್ರಮಗಳ ಕುರಿತು ಶ್ಲಾಘಿಸುತ್ತಾ, ಎಲ್ಲವೂ ಮೌಲ್ಯಯುಕ್ತ ಕಾರ್ಯಕ್ರಮಗಳಾಗಿದ್ದು ಮುಂಬರುವ ದಿನಗಳಲ್ಲಿ ಅಧ್ಯಯನಶೀಲ ಆಸಕ್ತರಿಗೆ ಈ ಎಲ್ಲಾ ಸಂವಾದಗಳು ಕೈಪಿಡಿಯಾಗಿ ಅನುಕೂಲವಾಗುತ್ತವೆ ಎಂದರು.

ಸಂವಾದ ನಿರ್ವಹಣೆಯನ್ನು ದೆಹಲಿ ಮೆಟ್ರೋ ರೈಲ್ವೆಯ ಸಹಾಯಕ ಸ್ಟೇಶನ್ ಮ್ಯಾನೇಜರ್ ಹಾಗೂ ‘ದಿನಕರ’ ತಂಡದ ಕಲಾವಿದರೂ ಆದ ಶ್ರೀಮತಿ ಆಶಾಲತಾ ಮಹಾದೇವ್ ಅವರು ಜನಪದ ರಂಗಭೂಮಿ, ಹವ್ಯಾಸಿ ರಂಗಭೂಮಿ ಹಾಗೂ ವೃತ್ತಿ ರಂಗಭೂಮಿಯಲ್ಲಿ ಹಾಸ್ಯ, ಮಹಿಳೆಯರ ಭಾಗವಹಿಸುವಿಕೆ, ಹಾಸ್ಯ ಕಲಾವಿದರಿಗೆ ಅನುಸರಣಾ ಹಾಗೂ ಅನುಪಾಲನಾ ಅಂಶ, ರಂಗಭೂಮಿಯಲ್ಲಿ ಯುವ ಜನತೆ ತೊಡಗಿಸಿಕೊಳ್ಳುವಿಕೆ, ಮಹಿಳೆ ಮತ್ತು ನಾಟಕಗಳಲ್ಲಿ ಹಾಸ್ಯ, ವೃತ್ತಿ ರಂಗಭೂಮಿಯ ಹಾಸ್ಯದ ಪ್ರಮಾಣ ಹಾಗೂ ಪರಿಣಾಮ ಕುರಿತಂತೆ ಅನೇಕ ಸಂದರ್ಭೋಚಿತ ಪ್ರಶ್ನೆಗಳ ಮೂಲಕ ಅರ್ಥಪೂರ್ಣ ಸಂವಾದವನ್ನು ನಡೆಸಿಕೊಟ್ಟರು. ಕಂಠದಾನ ಕಲಾವಿದರು ಹಾಗೂ ದಿನಕರ ಬಳಗದ ಕಲಾವಿದರೂ ಆದ ಶ್ರೀಮತಿ ವಿದ್ಯಾ ಭಟ್ ಅವರು ಸಂಪನ್ಮೂಲ ವ್ಯಕ್ತಿಯ ಪರಿಚಯ ಮಾಡಿಕೊಟ್ಟರು ಹಾಗೂ ಸಂವಾದ ನಿರ್ವಾಹಕರ ಪರಿಚಯವನ್ನೂ ಮಾಡಿಕೊಟ್ಟರು. ದಿನಕರದ ಕಲಾವಿದೆ ಗಾಯಕಿ ಶ್ರೀಮತಿ ನೇತ್ರಾವತಿ ಕುಮಾರ್ ಅವರು ದಿನಕರ ತಂಡದ ಕಾರ್ಯಗಳ ಪಕ್ಷಿನೋಟ ಹರಿಸಿ ಕುಮಾರಿಯರಾದ ಭಾಗ್ಯಶ್ರೀ ಮತ್ತು ಜಯಶ್ರೀ ಅವರ ಜೊತೆ ಕಾರ್ಯಕ್ರಮದ ಆರಂಭದಲ್ಲಿ ರಂಗಗೀತೆಯೊಂದನ್ನು ತುಂಬಾ ಸೊಗಸಾಗಿ ಪ್ರಸ್ತುತಪಡಿಸಿದರು.

**ಸಂತೋಷ್ ಕುಮಾರ್ ಉಪಾಧ್ಯಾಯ**



**ದಿನಾಂಕ 14.03.2021ರಂದು ನಡೆದ ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಕ್ರಿಕೆಟ್ ಪಂದ್ಯಾವಳಿಯ ಸಂದರ್ಭದಲ್ಲಿ ಕಳೆದ ವರ್ಷದ ಕ್ರಿಕೆಟ್ ವಿಜೇತ ತಂಡವಾದ ದೆಹಲಿ ತುಳು ಸಿರಿ ತಂಡದ ನಾಯಕ ರಾಘವ ಶರ್ಮಾ ಮತ್ತು ಆಟಗಾರರಿಗೆ ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಟ್ರೋಫಿಯನ್ನು ನೀಡಿ ಅಭಿನಂದಿಸಿದರು**



**ದಿನಾಂಕ 21.03.2021ರಂದು ನಡೆದ ದೆಹಲಿ ಕರ್ನಾಟಕ ಸಂಘದ ವಾರ್ಷಿಕ ಕ್ರೀಡಾಕೂಟದಲ್ಲಿ ನಡೆದ ಥ್ರೋಬಾಲ್ ಸ್ನೇಹ ಪಂದ್ಯಾವಳಿಯಲ್ಲಿ ವಿಜೇತರಾದ ದೆಹಲಿ ತುಳು ಸಿರಿ ಮಹಿಳಾ ತಂಡ ಮತ್ತು ದೆಹಲಿ ಕನ್ನಡ ಶಾಲೆಯ ಮಹಿಳಾ ತಂಡ.**

# ಬಾ. ಸಾಮಗರಿಗೆ ಭಾರತರತ್ನ ಡಾ| ಬಿ.ಆರ್. ಅಂಬೇಡ್ಕರ್ ಪ್ರಶಸ್ತಿ




ಹೊರನಾಡಿನಲ್ಲಿ ಕನ್ನಡಾಭಿವೃದ್ಧಿಗಾಗಿ ಅಪ್ರತಿಮ ಸೇವೆ ಸಲ್ಲಿಸಿದ್ದನ್ನು ಪರಿಗಣಿಸಿ ದೆಹಲಿ ಕನ್ನಡಿಗ, ತುಳುವೇರ್ ಪತ್ರಿಕೆಗಳ ಸಂಪಾದಕ ಬಾ. ಸಾಮಗ ಅವರಿಗೆ ವಿ.ಕೆ.ಎಂ. ಸಂಸ್ಥೆ ಸ್ಥಾಪಿಸಿರುವ ಈ ಸಾಲಿನ ಪ್ರತಿಷ್ಠಿತ ಭಾರತರತ್ನ ಡಾ| ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಯನ್ನು ಬೆಂಗಳೂರಿನಲ್ಲಿ ಮಾ. 18ರಂದು ಏರ್ಪಡಿಸಿದ್ದ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು.

ಅಧ್ಯಕ್ಷತೆ ವಹಿಸಿದ್ದ ಸುಪ್ರಸಿದ್ಧ ಕವಿ ಸಿದ್ದಲಿಂಗಯ್ಯ ಅವರು ಹೊರನಾಡಿನಲ್ಲಿ ಕನ್ನಡವನ್ನು ಕಟ್ಟಿ ಬೆಳೆಸಿದ ಸಾಮಗ ಅವರು ಕನ್ನಡ ಕಾರ್ಯಕರ್ತರಿಗೆ ಆದರ್ಶ ಎಂದರು.

ರಂಗಕರ್ಮಿ ಗೋಪಾಲಕೃಷ್ಣ ನಾಯರಿ, ಕರ್ನಾಟಕ ಮಹಿಳಾ ಪಡೆ ರಾಜ್ಯಾಧ್ಯಕ್ಷೆ ಲತಾ ಗೌಡ, ಜಾನಪದ ಗಾಯಕ ಗುರುರಾಜ ಹೊಸಕೋಟೆ, ನಟಿ ಕಾಮಿನಿದರನ್, ಜಯ ಕರ್ನಾಟಕ ಬೆಂಗಳೂರು ನಗರಾಧ್ಯಕ್ಷ ಜಗದೀಶ್ ಗೌಡ, ಸಂಸ್ಥೆಯ ಕಾರ್ಯಾಧ್ಯಕ್ಷ ಸಿ.ಎಂ. ವೆಂಕಟೇಶ್ ಉಪಸ್ಥಿತರಿದ್ದರು. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ, ನಟ, ನಿರ್ದೇಶಕ ಸಿ.ಎಂ. ತಿಮ್ಮಯ್ಯ ಕಾರ್ಯಕ್ರಮ ನಿರ್ವಹಿಸಿದರು.

## ಯಕ್ಷಗಾನ ಸಂಗ್ರಹಾಲಯದ ಅಗತ್ಯವಿದೆ

–ಬಾ. ಸಾಮಗ

ಕರ್ನಾಟಕದ ಅಗ್ರಗಣ್ಯ ಜಾನಪದ ಕಲೆಯಾಗಿರುವ ಕರಾವಳಿ ಯಕ್ಷಗಾನವನ್ನು ಸುವರ್ಣಯುಗಕ್ಕೆ ಕೊಂಡೊಯ್ದು ವಿಶ್ವದ ಅಗ್ರಗಣ್ಯ ಕಲೆಯಾಗಿಸಬೇಕೆಂದು ದೆಹಲಿ ಕನ್ನಡಿಗ, ತುಳುವೆರ್ ಪತ್ರಿಕೆಗಳ ಸಂಪಾದಕ ಬಾ. ಸಾಮಗ ಹೇಳಿದ್ದಾರೆ.

ಅವರು ಶ್ರೀ ಮಹಾಗಣಪತಿ ಯಕ್ಷಗಾನ ಕಲಾ ಸಂಘವು ಫೆ. 20ರಂದು ಉಡುಪಿಯ ಬೆಳ್ಳೆಯಲ್ಲಿ ಏರ್ಪಡಿಸಿದ್ದ 43ನೇ ವಾರ್ಷಿಕೋತ್ಸವ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು.

ಯಕ್ಷಗಾನದ ಪ್ರಗತಿಗೆ ಸರಕಾರವು ದಿಲ್ಲಿ, ಬೆಂಗಳೂರಲ್ಲಿ ಯಕ್ಷಗಾನ ಸಂಸ್ಕೃತಿ ಸಂಗ್ರಹಾಲಯ ಸ್ಥಾಪಿಸಿ ವಿಶ್ವದ ಮುಖ್ಯ ನಗರಗಳಲ್ಲಿ ಯಕ್ಷಗಾನ ಉತ್ಸವ ನಡೆಸಬೇಕೆಂದು ಆಗ್ರಹಿಸಿದರು. ಕನ್ನಡದೊಂದಿಗೆ ಬೇರೆ ಮುಖ್ಯ ಭಾಷೆಗಳನ್ನು ಬಳಸಿಕೊಂಡು ಕಲೆಗೆ ಸುಧಾರಣೆ ತರುವುದು ಅವಶ್ಯಕವೆಂದರು.

## ಜಯಪ್ರಕಾಶ್ ಪುತ್ತೂರು ಅವರಿಗೆ ಕನ್ನಡ ಸಿರಿ ಪ್ರಶಸ್ತಿ



ಮೂಲತಃ ಪುತ್ತೂರಿನ ದರ್ಬೆಯವರಾದ ಲೇಖಕ ಜಯಪ್ರಕಾಶ್ ಪುತ್ತೂರು ಅವರಿಗೆ ಇತ್ತೀಚೆಗೆ ಜರಗಿದ ದ.ಕ.ಜಿಲ್ಲಾ ಸಾಹಿತ್ಯ ಸಮ್ಮೇಳನದ ವೇಳೆ ಕನ್ನಡ ಸಿರಿ ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು.

ಸಿಂಡಿಕೇಟ್ ಬ್ಯಾಂಕ್ , ಕೇಂದ್ರ ರಕ್ಷಣೆ ಹಾಗೂ ಸಂಶೋಧನೆ ಇಲಾಖೆಯ , ಬೆಂಗಳೂರಿನ ಪ್ರತಿಷ್ಠಿತ ಎ. ಡಿ. ಏ ಹಾಗೂ ಡಿ.ಆರ್.ಡಿ ಓ ಸಂಸ್ಥೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ಡಾ.ಕಲಾಂ ಅವರ ಸಮನ್ವಯ ಹಾಗೂ ಶಿಷ್ಟಚಾರ ಅಧಿಕಾರಿ ಆಗಿ ಸೇವೆ ಸಲ್ಲಿಸಿರುವ ರಾವ್ ಅವರು ಬರವಣಿಗೆಯನ್ನು ಹವ್ಯಾಸವಾಗಿಸಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ್ದಾರೆ.

ಜಯಪ್ರಕಾಶ್ ರಾವ್ ಪುತ್ತೂರು ಅವರು ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ.

**ಅವರ ಪ್ರಮುಖ ಕೃತಿಗಳು**

1) ಅಗ್ನಿಯ ರೆಕ್ಕೆಗಳು

2) ಡಾ . ಅಬ್ದುಲ್ ಕಲಾಂ (ಮಕ್ಕಳ ಸಾಹಿತ್ಯ)

3) ಕಲಾಂ ಜೀವನ ಧರ್ಮ

4) ಹಮಾರಾ ಪಿ.ಆರ್.ಓ.



# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-

ರಾಷ್ಟ್ರದ ರಾಜಧಾನಿಯಲ್ಲಿ
ಕನ್ನಡಿಗರೊಬ್ಬರ ಬಹುವರ್ಣದ
ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು
ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ
ಕಾರ್ಯಗಳನ್ನು ಸಮಯಕ್ಕೆ
ಸರಿಯಾಗಿ ಅಚ್ಚುಕಟ್ಟಾಗಿ
ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್,
ಪ್ರಿಂಟಿಂಗ್ ಮತ್ತು ಬೈಂಡಿಂಗ್
ಕೆಲಸಗಳಿಗಾಗಿ ದಯವಿಟ್ಟು
ಸಂಪರ್ಕಿಸಿ

SAUJANYA
PRINTING PRESS
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
April-2021, Vol. No.31, Issue No. 7, Price Rs.1/-
RNI Regn. No. 53405/91, DL-SW-1/4016/19-21
Date of Publication : March 8th / 9th, Posting Date : 10th / 11th, Total Pages-20, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y



ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಇರುವ ಕಲಾವಿದ ಮಂಜುನಾಥ್ ಎನ್ ಅವರ ಕಲಾಕೃತಿ